ಕರ್ನಾಟಕ ವಿಧಾನಸಭೆ

ಮಂಗಳವಾರ 25ನೇ ಏಪ್ರಿಲ್ 2000ದಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ: 11- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ: ಎಂ.ವಿ.ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದ್ದರು

1. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಉತ್ತರ.

ಅಧ್ಯಕ್ಷರು: ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಮೊದಲನೆಯ ಕಾರ್ಯಕ್ರಮ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವೆಂದು ಇದೆ. ಆದರೆ ನಿನ್ನೆ ದಿವಸ ರಾತ್ತಿರ 7.30 ಗಂಟೆಯವರೆಗೂ ಸಭೆ ನಡೆಸಬೇಕೆಂದು ತೀರ್ಮಾನಿಸಿದ್ದೆವು. ಆದರೆ ವೇರಿಯಸ್ ರೀಜನ್‌ನಿಂದ ನಿನ್ನೆ ರಾತ್ತಿ 6.45 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಆದುದರಿಂದ ಈಗ ಮುಕ್ಕಾಲು ಗಂಟೆಯವರೆಗೆ ಮಾತನಾಡಬಹುದು, ಅದು ಒಬ್ಬರೇ ಮಾತನಾಡಬೇಕೆಂದು ಏನಿಲ್ಲ. ಈಗ ಮಾನ್ಯ ಎಸ್.ಎಸ್.ಪಾಟೀಲ್‌ರವರು ಮಾತನಾಡಲಿ, ಈಗ ಸಮಯ 11.15 ಗಂಟೆಯಾಗಿದೆ, ಮಾನ್ಯ ಮುಖ್ಯ ಮಂತ್ರಿಯವರು 12.00 ಗಂಟೆಗೆ ಸಭೆಗೆ ಬರುತ್ತಾರೆ. ಅವರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವಕ್ಕೆ ಉತ್ತರವನ್ನು ಕೊಡುತ್ತಾರೆ. ಆದುದರಿಂದ ಈಗ ಮಾತನಾಡುವವರು ಸಂಕ್ಷಿಪ್ತವಾಗಿ ಮಾತನಾಡಿದರೆ ಅನುಕೂಲವಾಗುತ್ತದೆ.

+ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿವಸ ಮಾತನಾಡುವಂತಹ ಸಂದರ್ಭದಲ್ಲಿ ಇವರು ರಾಜ್ಯಪಾಲರ ಭಾಷಣದಲ್ಲಿ ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಕನ್ನಡ ಕವಿ ಕುವೆಂಪು ಅವರ ಜಿಲ್ಲೆಯಲ್ಲಿ ಬೆಳೆದಂತಹ ಮಾನ್ಯ ಕಾಗೋಡು ತಿಮ್ಮಪ್ಪನವರು ಇಂಗ್ಲೀಷ್‌ನಲ್ಲಿ ಉತ್ತರವನ್ನು ಕಳುಹಿಸುತ್ತಾರೆಂದು ಹೇಳಿದ್ದೆ. ಅವರೆಲ್ಲಾ ತಿದ್ದಿಕೊಳ್ಳಬೇಕು, ತಾವು ನಿನ್ನೆ ದಿವಸ ಸಭೆಯಲ್ಲಿ ಇರಲಿಲ್ಲ. ಕುವೆಂಪುರವರ ನಾಡಿನಿಂದ ಬಂದಿರುವವರು ತಾವೇ ಇಂಗ್ಲೀಷ್‌ನಲ್ಲಿ ಶುರು ಮಾಡಿದರೆ ಹೇಗೆ?

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ನಿಮ್ಮಷ್ಟಕ್ಕೆ ನೀವೇ ಈಲ್ಡ್ ಆಗಿ ಬೇರೆ ವಿಷಯಗಳನ್ನು ಮಾತನಾಡುವುದನ್ನು ನಾನು ಇಷ್ಟಪಡುವುದಿಲ್ಲ. ತಾವು ಅಧ್ಯಕ್ಷರ ಗಮನಕ್ಕೆ ತರುವಂತಹ ರೀತಿಯಲ್ಲಿ ಮಾತನಾಡಿದರೆ ಸಾಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಶಾಸಕರು ಇಂಗ್ಲೀಷ್‌ನಲ್ಲಿ ಮಾತನಾಡಿದಾಗ ಯಾರೂ ವಿರೋಧ ಮಾಡಲಿಲ್ಲ. ಆಗ ಮಾನ್ಯ ಪಾಟೀಲ್ ನಾಗರಾಜ್‌ರವರು ಇಲ್ಲಿ ಇದ್ದಿದ್ದರೆ ಹೀಗೆ ನಡೆಯುತ್ತಿರಲಿಲ್ಲವೆಂದು ಪತ್ರಿಕೆಗಳಲ್ಲೂ ಕೂಡ ಬಂತು. ನಾವು ನಮ್ಮ ಶಾಸಕರಿಗೆ ಪದೇ ಪದೇ ಆ ರೀತಿಯಾಗಿ ಹೇಳುವುದು ಸರಿಯಲ್ಲವೆನ್ನುವ ದೃಷ್ಟಿಯಿಂದ ನಾವು ಏನೂ ಹೇಳಲಿಲ್ಲ. ಆದರೂ ಸಹ ನಮ್ಮ ಶಾಸಕರಲ್ಲಿ ಏನಂತಿ ಮಾಡಿಕೊಳ್ಳುತ್ತೇನೆ. ಯಾರು ಒಮ್ಮೆಲೆ ಎಲ್ಲವನ್ನು ಕಲಿತು ಹುಟ್ಟಿರುವುದಿಲ್ಲ. ಇವತ್ತು ಆಂಧ್ರಪ್ರದೇಶದಲ್ಲಿ, ತಮಿಳುನಾಡಿನಲ್ಲಿ, ಕೇರಳದಲ್ಲಿ, ಮಹಾರಾಷ್ಟ್ರದಲ್ಲಿ ಶಾಸಕರು ಇದ್ದಾರೆ. ಅವರು ಆಯಾ ರಾಜ್ಯದ ಭಾಷೆಯಲ್ಲಿ ಮಾತನಾಡುತ್ತಿದ್ದಾರೋ ಇಲ್ಲವೋ ಎಂಬುದನ್ನು ನಮ್ಮ ಶಾಸಕರು ಹೋಗಿ ನೋಡಿ ಬರಬೇಕು. ಈ ರಾಷ್ಟ್ರದ ಮೂಲೆ ಮೂಲೆಗಳಲ್ಲಿನ ರಾಜ್ಯಗಳಲ್ಲಿ ಶಾಸಕರಾಗಿ ಯಾರು ಇದ್ದಾರೋ ಅವರೆಲ್ಲರೂ ಆಯಾ ರಾಜ್ಯ ಭಾಷೆಯಲ್ಲೇ ಮಾತನಾಡುತ್ತಿದ್ದಾರೆ. ಆದುದರಿಂದ, ನಾನು ನಮ್ಮ ಎಲ್ಲಾ ಶಾಸಕರಲ್ಲೂ ಕೇಳಿಕೊಳ್ಳುತ್ತೇನೆ. ನಾವು ಈ ವಿಧಾನಸಭೆಯಲ್ಲಿ ಕನ್ನಡದಲ್ಲಿ ಮಾತನಾಡದೆ ಹೋದರೆ ಇನ್ನು ನಾವು ಹೊರಗಿನವರಿಗೆ ಹೇಳುವುದಕ್ಕೆ ಏನು ಹಕ್ಕು ಇದೆ? ಅಧಿಕಾರಿಗಳಿಗೆ ಹೇಳುವುದಕ್ಕೆ ಏನು ಹಕ್ಕು ಇದೆ? ನೀವು ಕನ್ನಡವನ್ನು ಮೊದಲು ವಿಧಾನಸಭೆಯಲ್ಲಿ ತಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಆ ದೃಷ್ಟಿಯಿಂದ ನಾವೆಲ್ಲರೂ ಕನ್ನಡವನ್ನು ಆಚರಣೆಗೆ ತರೋಣ. ಈ ಬಗ್ಗೆ ಸಂಪೂರ್ಣವಾಗಿ ಕನ್ನಡವನ್ನು ಆಡಳಿತ ಭಾಷೆಯಾಗುವಂಥಾದ್ದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ಇನ್ನು ಬಹಳ ಪ್ರಮುಖವಾದಂಥಾದ್ದು ಶ್ವೇತ ಪತ್ರಕ್ಕೆ ಒತ್ತು ಕೊಡುತ್ತೇನೆ. ಎಲ್ಲಾ ಚರ್ಚೆಯೂ ಸುಳ್ಳು ಇದೆ. ನಾವು 50 ಲೀಟರ್ ನೀರು ಕೊಡುತ್ತೇವೆ, ಕೃಷಿಗೆ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ, ರೈತರಿಗೆ ಅನುಕೂಲ ಮಾಡುತ್ತೇವೆಂದು ಹೇಳಿದ್ದಾರೆ. ಇದನ್ನು ಮಾಡುವುದಕ್ಕೆ ದುಡ್ಡು ಎಲ್ಲಿದೆ. ಈ ಶ್ವೇತಪತ್ರವನ್ನು ನೋಡಿದರೆ ಗಂಭೀರವಾದಂತಹ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಸರ್ಕಾರ ಏನೇನು ಕಠಿಣ ಕ್ರಮವೆಂದು ಹೇಳಿದ್ದಾರೆ, ಆರ್ಥಿಕ ದೃಷ್ಟಿಯಿಂದ ಅಂಥ ಕಠಿಣ ನಿರ್ಧಾರವನ್ನು ಕೈಗೊಳ್ಳುವುದು ಈಗ ಅನಿವಾರ್ಯವಾಗಿದೆ. ಅಂತಹ ಯಾವ ಕಠಿಣ ನಿರ್ಧಾರಗಳನ್ನು ಈ ಆರು ತಿಂಗಳಲ್ಲಿ ತೆಗೆದುಕೊಂಡಿದ್ದೀರಿ, ಏಂದು ಸರ್ಕಾರವನ್ನು ನಾನು ಕೇಳುತ್ತಿದ್ದೇನೆ. ತಾವು ಆಯೋಗವನ್ನು ಮಾಡಿದ್ದೀರಲ್ಲಾ, ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ತಮಗೆ ಶಕ್ತಿ ಇಲ್ಲವಾ? ನಿಮ್ಮಲ್ಲಿ ನೈಪುಣ್ಯತೆ ಇಲ್ಲವೇ? ಮಾನ್ಯ ಮುಖ್ಯಮಂತ್ರಿಯವರಲ್ಲಿ ಇಲ್ಲವೇ? ಪಕ್ಕ ಮತ್ತೊಂದು ಆಯೋಗ ಬೇಕಾಗಿತ್ತು? ಆರ್ಥಿಕ ಸುಧಾರಣೆಗೆ ಒಂದು ಪ್ರತ್ಯೇಕ ಆಯೋಗದ ಅವಶ್ಯಕತೆ ಇತ್ತಾ? ಏಂದು ನಾನು ಕೇಳುತ್ತಿದ್ದೇನೆ. ಇವರಿಗೆ ಯಾರಿಗೂ ಆಸಕ್ತಿ ಇಲ್ಲವೇ, ಮಾನ್ಯ ಮುಖ್ಯಮಂತ್ರಿಗಳು ಅನುಭವಿಗಳಲ್ಲವೆಂದು ನಾನು ಹೇಳುವುದಿಲ್ಲ. ಇಲ್ಲಿ ಬಹಳ ಅನುಭವಿ ಹಿರಿಯ ಸಚಿವರುಗಳು ಇದ್ದಾರೆ. ಇವತ್ತು ನಾನು ಕೇಳುವುದೇನೆಂದರೆ

ಅಧಿಕಾರ ವಂಚಿತ ಕಾಂಗ್ರೆಸ್ಸಿಗರ ಪುನರ್ ವಸತಿ ಕೇಂದ್ರವನ್ನಾಗಿ ಆಯೋಗಗಳನ್ನು ಮಾಡುವುದಕ್ಕೆ ತಾವು ಹೊರಟಿದ್ದೀರಿ ತನ್ಮೂಲಕ ನೀವು ರಾಜ್ಯದ ಬೊಕ್ಕಸವನ್ನು★ ಹೂಡೆಯುತ್ತಿದ್ದೀರಿ. ಇದು ನನ್ನ ಮುಂದಿರುವಂತಹ ಪ್ರಶ್ನೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಟೀಕೆ ಮಾಡುವುದನ್ನು ಮಾಡಲಿ. ಅವರೆ★ ಹೂಡೆಯುತ್ತಾರೆ ಅಂದರೆ ಏನು ಅರ್ಥ?

ಶ್ರೀ ಎಸ್.ಎಸ್.ಪಾಟೀಲ್: ಅದರ ಅರ್ಥ ಏನು ಎಂದರೆ ಸರ್ಕಾರದ ಬೊಕ್ಕಸದ ಹಣವನ್ನು ಹಾಳು ಮಾಡುತ್ತಿದ್ದೀರಿ, ಅದನ್ನು ಹಾಗೇ ಹೇಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಟ್ಯಾಕ್ಸ್ ರೀ ಸ್ಟ್ರಕ್ಚರ್ ಮಾಡುವುದಕ್ಕೆ ನಾವು ಒಂದು ಸಮಿತಿಯನ್ನು ಮಾಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ಕದ್ದುಮುಚ್ಚಿ ಮಾಡಿದ್ದಲ್ಲ. ಯಾರ ಮನೆಯನ್ನಾದರೂ ಹೂಡೆದುಕೊಂಡು ಮಾಡುತ್ತಿದ್ದೇವೆಯೇ?

ಶ್ರೀ ಎಸ್.ಎಸ್.ಪಾಟೀಲ್: ನಿಮಗೆ ಆ ಶಕ್ತಿಯಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ★ಹೂಡೆದುಕೊಂಡು ಹೋಗುತ್ತೇವೆಯೇ?★ ಹೂಡೆಯುವುದು ಅಂದರೆ ಏನು ಅರ್ಥ? ನಿಮ್ಮ ಮನೆಯನ್ನು ಲೂಟಿ ಮಾಡುತ್ತಿದ್ದೇವೆಯೇ?

ಅಧ್ಯಕ್ಷರು: ಪಾಟೀಲರೇ ಒಳ್ಳೆಯ ಭಾಷೆಯನ್ನು ಉಪಯೋಗಿಸಿ. ಏಕೆ ಅಂಥ ಭಾಷೆಯನ್ನು ಉಪಯೋಗಿಸುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಏನೋ ಸ್ವಲ್ಪ ಮಾತನಾಡಲು ಬರುತ್ತದೆ ಎಂದರೆ ಹೀಗೆ ಮಾತನಾಡುವುದೇ?

ಅಧ್ಯಕ್ಷರು: ಏಕೆ ಕೆಟ್ಟ ಭಾಷೆಯನ್ನು ಉಪಯೋಗಿಸುತ್ತೀರಿ? ಒಳ್ಳೆಯ ಭಾಷೆ ನಿಮಗೆ ಬರುತ್ತದೆ. ನೀವು ಹೇಳಬೇಕಾಗಿರುವುದನ್ನು ಒಳ್ಳೆಯ ಭಾಷೆಯಲ್ಲೇ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಅವರು ಮಾಡಿದ ಎಲ್ಲವನ್ನೂ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಮಾಡಿರುವುದನ್ನು ನೋಡಿದರೆ ಇದು ಏನೇನೂ ಅಲ್ಲ.

★ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಸದಸ್ಯರು ಪಾಪಸ್ಸು ಹಿಂದಕ್ಕೆ ಪಡೆಯುವುದರಿಂದ ತೆಗೆದು ಹಾಕಲಾಗಿದೆ.

ಶ್ರೀ ಎಸ್.ಎಸ್.ಪಾಟೀಲ್: ಯಾವ ಯಾವ ಶಬ್ದಗಳನ್ನು ಅವರು ಉಪಯೋಗಿಸಿದ್ದಾರೆ ಎಂದರೆ, ನಾವು ಅವರ ಸಮಕ್ಕೆ ಕೆಟ್ಟ ಶಬ್ದಗಳನ್ನು ಉಪಯೋಗಿಸುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಭಾಷೆಯನ್ನು ಸರಿಯಾಗಿ ಉಪಯೋಗಿಸಿದ್ದಿದ್ದರೆ ಈ ರೀತಿ ಗದ್ದಲ ಆಗುತ್ತಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮಗಿಂತ ಖಡೀಮವಾದ ಭಾಷೆ ಬಳಸಲು ನನಗೂ ಗೊತ್ತಿದೆ.

ಶ್ರೀ ಎಸ್.ಎಸ್.ಪಾಟೀಲ್: ಆಯಿತು, ಶಬ್ದವನ್ನು ಬದಲಾವಣೆ ಮಾಡುತ್ತೇನೆ. ಸರ್ಕಾರದ ಖಜಾನೆಯನ್ನು ಹಾಳು ಮಾಡುತ್ತಿದ್ದಾರೆ. ಅವರಿಗೆ ಕ್ಯಾಬಿನೆಟ್ ರ್ಯಾಂಕ್ ಕೊಡುವಂಥ ಅವಶ್ಯಕತೆ ಇರಲಿಲ್ಲ. ನಿಮಗ್ಯಾರಿಗೂ ಆಡಳಿತ ಸುಧಾರಣೆ ಮಾಡುವಂಥ ಶಕ್ತಿ ಇಲ್ಲವೇ? ಆರ್ಥಿಕ ಸುಧಾರಣೆ ಮಾಡುವಂಥ ಶಕ್ತಿವಂತ ಮಂತ್ರಿಗಳ್ಯಾರೂ ಇಲ್ಲವೇ? ಎಲ್ಲದಕ್ಕೂ ಒಂದೊಂದು ಆಯೋಗ ಮಾಡುವುದಾದರೆ ಮಂತ್ರಿಗಳು ಏಕೆ ಬೇಕು? ಆಯಾಯ ಮಂತ್ರಿಗಳು ಅವರವರ ಖಾತೆಯನ್ನು ಸುಧಾರಿಸಿದರೆ ಖಂಡಿತವಾಗಿಯೂ ಆಡಳಿತ ಸುಧಾರಣೆ ಆಗುತ್ತದೆ. ಆ ರೀತಿ ಸುಧಾರಣೆ ಮಾಡುವ ಶಕ್ತಿ ಇಲ್ಲದಂಥ ಮಂತ್ರಿಗಳಿದ್ದರೆ ಅವರನ್ನು ಕಡಿಮೆ ಮಾಡಿ. ನಿನ್ನೆ ಮುಖ್ಯಮಂತ್ರಿಗಳು ಬಹಳ ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ. ನಾನು ಇವತ್ತು ಮುಖ್ಯಮಂತ್ರಿಗಳನ್ನು ಪ್ರಶಂಸೆ ಮಾಡುತ್ತೇನೆ. ಅದನ್ನು ಅನುಷ್ಠಾನಕ್ಕೆ ತರುತ್ತಾರೋ, ಇಲ್ಲವೋ ಎಂದು ನೋಡಬೇಕಷ್ಟೇ.

ಅಧ್ಯಕ್ಷರು: ರಾಜ್ಯಪಾಲರ ಭಾಷಣದಲ್ಲಿ ಇರುವಂಥಾದ್ದನ್ನು ಹೇಳಿ ದಯವಿಟ್ಟು ಸಬ್ಜೆಕ್ಟ್ ಡೀವಿಯೇಟ್ ಮಾಡಬೇಡಿ.

ಶ್ರೀ ಎಸ್.ಎಸ್.ಪಾಟೀಲ್: ಇದನ್ನು ರಾಜ್ಯಪಾಲರ ಭಾಷಣದ ಮೇಲೆಯೇ ಹೇಳಬೇಕು ಎಂದು ಮಾಡಿದ್ದೇವೆ. ಡೀವಿಯೇಟ್ ಅಲ್ಲ, ಇದು ವಾಸ್ತವಿಕ ಪರಿಸ್ಥಿತಿ. ರಾಜ್ಯಪಾಲರ ಭಾಷಣದ ಮೇಲೆ ಇದೆಲ್ಲವನ್ನೂ ನಾವು ಮಾತನಾಡಬೇಕಾಗುತ್ತದೆ. ಆಡಳಿತ ಸುಧಾರಣೆ ದೃಷ್ಟಿಯಿಂದ ಇವರು ಏನು ಮಾಡುತ್ತಿದ್ದಾರೆ, ಅದರ ಅವಶ್ಯಕತೆ ಇದೆಯೇ? ಈ ದುಡ್ಡು ಸರ್ಕಾರದ ಖಜಾನೆಯದಲ್ಲವೇ? ಇಬ್ಬರು ಕ್ಯಾಬಿನೆಟ್ ದರ್ಜೆಯ ಮಿನಿಸ್ಟರ್‌ಗಳನ್ನು ಮಾಡಿದರು. ಇನ್ನೂ ಬಹಳ ಜನ ಇದ್ದಾರೆ. ಮುಂದೆ ಏನೇನು ಮಾಡುತ್ತಾರೋ, ದೇವರಿಗೇ ಗೊತ್ತು. ಮುಂದೆ ಇದು ಪುನರ್‌ವಸತಿ ಕೇಂದ್ರವಾಗುತ್ತದೆ. ಈ ರಾಜ್ಯದ ಖಜಾನೆಯನ್ನು ಅಧಿಕಾರ ವಂಚಿತ ಕಾಂಗ್ರೆಸ್ಸಿಗರ ಪುನರ್ವಸತಿ ಕೇಂದ್ರಕ್ಕಾಗಿ ಉಪಯೋಗಿಸುವಿರಾ ಎನ್ನುವುದೇ ನನ್ನ ಪ್ರಶ್ನೆಯಾಗಿದೆ. ನಾನು

ಮೊದಲೇ ಹೇಳಿದ ಎನ್ನುವ ಶಬ್ದವನ್ನು ಹಿಂದೆ ತೆಗೆದುಕೊಂಡಿದ್ದೇನೆ. ಅದನ್ನು ಹೇಳುವುದಿಲ್ಲ. ಆದರೆ, ಖಜಾನೆಯನ್ನು ಹಾಳು ಮಾಡುತ್ತಿದ್ದೀರಿ.

(ಈ ಹಂತದಲ್ಲಿ ಸಚಿವರಾದ ರಮಾನಾಥ್ ರೈರವರು ಮಾತನಾಡಲು ಎದ್ದುನಿಂತರು)

ಆನಂತರ ನಿಮ್ಮ ವಿಷಯಕ್ಕೆ ಕೂಡ ಬರುತ್ತೇನೆ.

ಅಧ್ಯಕ್ಷರು: ದಯವಿಟ್ಟು ನೀವು ನಮ್ಮ ಕಡೆ ಅಡ್ರೆಸ್ ಮಾಡಿ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಇವರು ಉತ್ತರ ಕೊಟ್ಟಿರುವುದರಲ್ಲಿ ಸುಳ್ಳು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು: ಸುಳ್ಳು ಎಂದು ಏಕೆ ಹೇಳುತ್ತೀರಿ, ಸತ್ಯಕ್ಕೆ ದೂರವಾದುದು ಎಂದು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಚಂದ್ರಣ್ಣನವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ: ಅವರು ಇದ್ದುದನ್ನು ನೇರವಾಗಿ ಹೇಳುತ್ತಿದ್ದಾರೆ. ಸುಳ್ಳು ಎಂದೇ ಹೇಳಬೇಕು. ಸತ್ಯಕ್ಕೆ ದೂರವಾದುದು ಎಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಈ ರೀತಿ ಸಮಯ ವ್ಯಯ ಮಾಡಿದರೆ ಹೇಗೆ? 12 ಗಂಟೆಗೆ ಮುಖ್ಯಮಂತ್ರಿಗಳಿಂದ ಉತ್ತರ ಪ್ರಾರಂಭವಾಗುತ್ತದೆ. 12 ಗಂಟೆಯ ನಂತರ ಮಾತನಾಡಲು ನಾನು ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: 23,884 ಕೋಟಿ ರೂಪಾಯಿಗಳ ಸಾಲ ಇದೆ ಎಂದು ಶ್ವೇತ ಪತ್ರದಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಚಂದ್ರಣ್ಣನವರು ಕೇಳಿರುವ ಅದೇ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ 15,014 ಕೋಟಿ ರೂಪಾಯಿಗಳ ಸಾಲ ಇದೆ ಎಂದು ಹೇಳುತ್ತಾರೆ. ಯಾವುದು ಖರೆ? ನಾವು ಯಾವುದನ್ನು ನಂಬಬೇಕು? ಆಮೇಲೆ, ಸುಮಾರು 2,300 ಕೋಟಿ ರೂಪಾಯಿಗಳನ್ನು ಬಡ್ಡಿ ಕೊಡುತ್ತೇವೆ ಎಂದು ಉತ್ತರ ಹೇಳುತ್ತಾರೆ. ಆದರೆ ಇಲ್ಲಿ 7 ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ: 7 ಸಾವಿರವಲ್ಲ, 15 ಸಾವಿರ ರೂಪಾಯಿಗಳು ಎಂದು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಹೀಗೆ 8 ಸಾವಿರ ಕೋಟಿ ರೂಪಾಯಿಗಳು ಎಂದು ಕಡಿಮೆ ಅಂಕಿಯನ್ನು ಹೇಳುತ್ತಾರೆ. ಯಾವುದು ಖರೆ, ಯಾವುದು ಸತ್ಯ? ಇದನ್ನು ತಾವೇ ನೋಡಬೇಕು. ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ನಮಗೆ ಇದನ್ನು

ಹೇಳಬೇಕು. ಯಾವುದು ಸತ್ಯವಾದ ಮಾತು, ಉತ್ತರದಲ್ಲಿ ಹೇಳಿರುವುದು ಸತ್ಯವೋ ಅಥವಾ ಶ್ವೇತಪತ್ರದಲ್ಲಿ ಮಂಡಿಸಿರುವುದು ಸತ್ಯವೋ ಎನ್ನುವುದನ್ನು ನಮಗೆ ಹೇಳಬೇಕಾಗುತ್ತದೆ. ಇನ್ನು ಮಾನ್ಯ ದೇಶಪಾಂಡೆಯವರು ಇಲ್ಲಿದ್ದಾರೆ. ಇವರು ಈ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಈ ಸದನದ ಮುಖಾಂತರ ಇಡೀ ರಾಜ್ಯದ ಜನತೆಯನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ತಾವು ನನ್ನನ್ನೂ ಕೂಡ ಸದಸ್ಯನನ್ನಾಗಿ ಮಾಡಿದ್ದೀರಿ. 4,500 ಕೋಟಿ ರೂಪಾಯಿಗಳನ್ನು ಸರ್ಕಾರ ಸಾರ್ವಜನಿಕ ಉದ್ದಿಮೆಗಳಲ್ಲಿ ಇನ್‌ವೆಸ್ಟ್ ಮಾಡಿದೆ ಎಂದು ಸಾರ್ವಜನಿಕ ಉದ್ದಿಮೆಗಳ ಸಮಿತಿಯವರು ನಮಗೆ ಮಾಹಿತಿ ಕೊಟ್ಟಿದ್ದಾರೆ. ಆದರೆ ಇಲ್ಲಿ ನೋಡಿದರೆ, 16,124 ಕೋಟಿ ರೂಪಾಯಿಗಳು ಹಾಕಿದ್ದೇವೆ ಎಂದು ಇದೆ. ಯಾವುದು ಖರೆ? ಎರಡು ಅಂಕಿಗಳೂ ಇಲ್ಲಿವೆ. ನೋಡಿ ಎಷ್ಟು ಅಂತರವಾಯಿತು.

ಶ್ರೀ ಆರ್.ವಿ.ದೇಶಪಾಂಡೆ: 4500 ಕೋಟಿ ರೂಪಾಯಿಗಳು ಎಂದು ಎಲ್ಲಿ ಹೇಳಿದ್ದೇವೆ? ಸರ್ಕಾರ ಹಾಕಿರುವುದೆಲ್ಲಾ ಕೈಗಾರಿಕಾ ಇಲಾಖೆಗೆ ಬರುವುದಿಲ್ಲ. ಹಲವಾರು ಇಲಾಖೆ ಸೇರಿ.

ಶ್ರೀ ಎಸ್.ಎಸ್.ಪಾಟೀಲ್: ಓದುತ್ತೇನೆ ಕೇಳಿ. 31ನೇ ಮಾರ್ಚ್ 1999. ಸಮಿತಿಯ ಮೊದಲನೇ ಮೀಟಿಂಗ್‌ನಲ್ಲೇ ನಮಗೆ ಲೆಕ್ಕ ಕೊಟ್ಟಿದ್ದಾರೆ. 78 ಉದ್ದಿಮೆಗಳು ಎಂದು ಹೇಳಿದ್ದಾರೆ. ಇಲ್ಲೂ ಕೂಡ 78 ಉದ್ದಿಮೆಗಳು ಎಂದು ಹೇಳುತ್ತಾರೆ. 66 ಸರ್ಕಾರೀ ಉದ್ದಿಮೆಗಳು, 13 ಅಧೀನ ಕಂಪನಿಗಳು ಸೇರಿ 6 ಶಾಸನಬದ್ಧ ನಿಗಮಗಳು ಅಸ್ತಿತ್ವದಲ್ಲಿವೆ. 66 ಸರ್ಕಾರೀ ಸಂಸ್ಥೆಗಳಲ್ಲಿ ಹೂಡಿರುವ ರಾಜ್ಯ ಸರ್ಕಾರದ ಬಂಡವಾಳ 4,515 ಕೋಟಿ ರೂಪಾಯಿಗಳು ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಆದರೆ ಶ್ವೇತಪತ್ರದಲ್ಲಿ 16 ಸಾವಿರ ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ಯಾವುದು ಖರೆ, ಯಾವುದನ್ನು ನಂಬೋಣ? ಇದು ಇವರು ತೋರಿಸಿರತಕ್ಕಂಥ ಲೆಕ್ಕ. ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟರೇನೋ ನನಗೆ ಗೊತ್ತಿಲ್ಲ. ಇಲ್ಲಿ ತಮ್ಮಂಥ ಉತ್ತರ ಕೇಳುವುದೇ ದೊಡ್ಡ ಅಪರಾಧವಾಗುತ್ತದೆ. ನಾನು ಇನ್ನೂ ಮಾತನಾಡುತ್ತಾ ಹೋದರೆ ತಾವು ನನಗೆ ಸಮಯ ಕೊಡುವುದಿಲ್ಲ, ಇನ್ನೂ ಕೆಲವು ಶಾಸಕರು ಮಾತನಾಡುವವರಿದ್ದಾರೆ. ನಾನು ಹೇಳಿದೆ, ಇದು ಮಹತ್ವದ್ದು, ಶ್ವೇತ ಪತ್ರವನ್ನು ಪ್ರಾಮಾಣಿಕವಾಗಿ ಮಂಡಿಸಿದ್ದಾರೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಇದರ ಬಗ್ಗೆ ಒಂದು ವಾರ ಡಿಸ್ಕಷನ್ ಇಡಿ. ಪಕ್ಷಾತೀತವಾಗಿ ಚರ್ಚೆ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖಿರ್ಗೆ: ಶ್ವೇತಪತ್ರದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಅವರು ಇದು ಎರಡನೇ ಸಲ ಕೇಳುತ್ತಿರುವುದು. ಮಾನ್ಯ ಜೈರೇಗೌಡರೂ ಕೂಡ ಒಂದು ಸಲ ಇದನ್ನು ಪ್ರಸ್ತಾಪ ಮಾಡಿದ್ದರು. ಮುಖ್ಯಮಂತ್ರಿಗಳೂ ಕೂಡ ಇವಕ್ಕೆ ಒಪ್ಪಿದ್ದಾರೆ. ಜನಗಳಿಗೆ ಗೊತ್ತಾಗಲಿ ಎಂದೇ ಇದನ್ನು ಇಟ್ಟಿದ್ದೇವೆ. ಏಂದು ಅವರು

ಹೇಳಿದ್ದಾರೆ. ತಾವು ಒಂದು ಸಮಯವನ್ನು ನಿಗದಿ ಮಾಡಿ. ಚರ್ಚೆಗೆ ಅವರೂ ಸಿದ್ಧರಿದ್ದಾರೆ.

ಅಧ್ಯಕ್ಷರು: ಆಯಿತು. ಫಿಕ್ಸ್ ಮಾಡ್ಕೋಣ ಬಿಡಿ.

ಶ್ರೀ ಎಸ್.ಎಸ್.ಪಾಟೀಲ್: ಹಾಗಾದರೆ ನಾನು ಮಾತನಾಡುವ ಅಗತ್ಯವೇ ಇಲ್ಲ. ಸ್ವಲ್ಪದರಲ್ಲೇ ಮುಗಿಸಿಬಿಡುತ್ತೇನೆ. ನೇರವಾಗಿ ಅವರ ಮೇಲೇ ಚರ್ಚೆ ಮಾಡುವುದು ಯೋಗ್ಯ. ಬಹಳ ಪ್ರಾಮಾಣಿಕವಾಗಿ ಮಂಡಿಸಿದ್ದಾರೆ. ಈ ರಾಜ್ಯದ ಸ್ಥಿತಿ ಏನಾಗುತ್ತದೆ ಎಂದರೆ, ಬಹಳ ವರ್ಷ ಬೇಕಾಗಿಲ್ಲ, ಇನ್ನು ಐದು ವರ್ಷಗಳಲ್ಲಿ, ಬಹುಶಃ ನಿಮ್ಮ ಅವಧಿ ಮುಗಿಯುವುದರೊಳಗಾಗಿ ಅಥವಾ ಮುಂದಿನವರು ಬರುವುದರೊಳಗಾಗಿ ನೌಕರರಿಗೆ ಪಗಾರ ಇಲ್ಲದ ಹಾಗೆ ಆಗುತ್ತದೆ. ಅದನ್ನು ತಾವೇ ಹೇಳ್ತಿರಿ.

ಅಧ್ಯಕ್ಷರು: ಡಿಸ್ಕಷನ್ ಇಟ್ಟುಕೊಳ್ಳೋಣ ಎಂದು ಹೇಳಿದ ಮೇಲೆ ಅವರ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮ್ಮದು ಮುಗಿಯುತ್ತದೆ, ಮುಗಿಯುತ್ತದೆ ಎಂದು ಏಕೆ ಹೇಳುತ್ತೀರಿ?

ಶ್ರೀ ಎಸ್.ಎಸ್.ಪಾಟೀಲ್: ನಿಮ್ಮ ಪರಿಸ್ಥಿತಿ ನೋಡಿದರೆ ಹಾಗೆ ಕಾಣುತ್ತದೆ. ಏಕೆಂದರೆ ನಿಮ್ಮ ಮಂತ್ರಿಗಳ ಗುದ್ದಾಟ ಇವೆಲ್ಲಾ ದಿನಾ ಪೇಪರ್‌ನಲ್ಲಿ ಬರುತ್ತಿವೆ. ಎಲ್ಲಾ ನಡೆದಿದೆ.

ಅಧ್ಯಕ್ಷರು: ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಎಸ್.ಎಸ್.ಪಾಟೀಲ್: ನಾನು ಕೃಷಿ ಬಗ್ಗೆ ಮತ್ತು ಕೆಲವು ಸಹಕಾರಿ ಸಂಸ್ಥೆಗಳ ಬಗ್ಗೆ ಮಾತನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ತಾವು ಪ್ರಾರಂಭ ಮಾಡಿ 10 ನಿಮಿಷಗಳಾಯಿತು. ಇನ್ನು 10 ನಿಮಿಷಗಳಲ್ಲಿ ಮುಗಿಸಿ. ನಿನ್ನೆ 20 ನಿಮಿಷ ಮಾತನಾಡಿದ್ದೀರಿ. ಒಟ್ಟು 30 ನಿಮಿಷಗಳು ಈಗಾಗಲೇ ಮಾತನಾಡಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್: ತಾವು ಕೃಷಿಗೆ ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದೀರಿ. ನಾನು ಖರ್ಗೆ ಸಾಹೇಬರನ್ನು ಕೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಚಿವರಾದ ಸಿ.ಆರ್.ಸಗೀರ್ ಅಹಮದ್‌ರವರು ಮಾತನಾಡಲು ಪ್ರಯತ್ನಿಸಿದರು)

ತದನಂತರ ನಾನು ನಿಮ್ಮ ವಿಷಯಕ್ಕೆ ಬರುತ್ತೇನೆ. ಟೈರ್, ಟ್ಯೂಬ್ ಎಲ್ಲ

ಮಾರಿಕೊಂಡು ಹೋಗಿದ್ದಿರಿ. ಅದೆಲ್ಲದಕ್ಕೂ ಬರುತ್ತೇನೆ. ಆದರೆ ಏನು ಮಾಡುವುದು, ಟೈಂ ಇಲ್ಲ, ಕೇವಲ 10 ನಿಮಿಷಗಳು ಎಂದು ಹೇಳಿದ್ದಾರೆ. ಆದ್ದರಿಂದ ಎಲ್ಲ ಪರಿಸ್ಥಿತಿಯನ್ನು ಸ್ವಲ್ಪ ಸ್ವಲ್ಪ ಹೇಳುತ್ತೇನೆ. ಈಗ ರಾಜಸ್ಥಾನ ಮತ್ತು ಗುಜರಾತ್‌ಗಳಲ್ಲಿರುವುದಕ್ಕಿಂತ ಭೀಕರ ಬರಗಾಲ ನಮ್ಮ ಕರ್ನಾಟಕದಲ್ಲಿದೆ. ಮೊನ್ನೆ ನಮ್ಮ ಗದಗ್ ಜಿಲ್ಲೆಗೆ ಉಸ್ತುವಾರಿ ಸಚಿವರು ಬಂದಿದ್ದಾಗ, ಮೇವಿನ ವ್ಯವಸ್ಥೆ ಮಾಡಿ, ಗೋ ಶಾಲೆಗಳನ್ನು ತೆಗೆಯಿರಿ ಎಂದು ಅರ್ಜಿ ಕೊಟ್ಟರು. ಇವತ್ತು ರಾಜ್ಯದ ಸುಮಾರು ಅರ್ಧ ಭಾಗದಲ್ಲಿ ಆ ಪರಿಸ್ಥಿತಿ ಇದೆ. ಇವರಿಗೆ ಅದರ ಅರಿವೇ ಇಲ್ಲ. ರಾಜಸ್ಥಾನ, ಗುಜರಾತ್‌ಗಳಲ್ಲಿರುವಂಥ ಪರಿಸ್ಥಿತಿ ನಮ್ಮ ಗುಲ್ಬರ್ಗಾದಲ್ಲಿ ಇದೆ.

ಬಹುಶಃ ಅರ್ಧ ಭಾಗ ರಾಜಸ್ಥಾನ, ಗುಜರಾತ್‌ನಲ್ಲಿ ಏನಿದೆ ಆ ಪರಿಸ್ಥಿತಿ ನಮ್ಮ ರಾಜ್ಯದ ಗುಲ್ಬರ್ಗಾ ಜಿಲ್ಲೆಯಲ್ಲಿ ಇದೆ. ಇವರಿಗೆ ಇವತ್ತಿನ ದಿವಸ ಅಲ್ಲಿನ ಜನರ ಬಗ್ಗೆ ಕಲ್ಪನೆ, ಅನುಕಂಪ ಇಲ್ಲ. ಹುಬ್ಬಳ್ಳಿ-ಧಾರವಾಡ, ಬೆಂಗಳೂರು ಇಲ್ಲಿ ಬರ ಇಲ್ಲ. ನೋಡುವುದಕ್ಕೆ ಚೆಂದ ಕಾಣುತ್ತದೆ. ಬೆಂಗಳೂರು (ಗ್ರಾಮಾಂತರ) ಜಿಲ್ಲೆಗೆ ಹೋಗಿ ನೋಡಿ, ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಇದೇ ರೀತಿ ನಮ್ಮ ರಾಜ್ಯದ ಬಹುಭಾಗದ ಪರಿಸ್ಥಿತಿ ಇದೆ. ಆದರೆ ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ, ಕಳಕಳಿ ಇಲ್ಲ. ರೈತರ ಬಗ್ಗೆ ಕಾಳಜಿ ವಹಿಸದೆ ಬಹುಶಃ ಹೀಗೇ ಒಂದು ತಿಂಗಳು ಬಿಟ್ಟರೆ ರಾಜ್ಯದಲ್ಲಿ ಕ್ಷೋಭೆ ಉಂಟಾಗುತ್ತದೆ. ಇಡೀ ರಾಜ್ಯದಲ್ಲಿ ಕ್ಷಾಮ ಉಂಟಾಗಿ ರೈತರು ದಂಗೆ ಏಳುತ್ತಾರೆ. ಅವರು ಸುಮ್ಮನೆ ಬಿಡುವುದಿಲ್ಲ. ಆ ಕಾರಣದಿಂದ ಮುನ್ನೆಚ್ಚರಿಕೆ ವಹಿಸಿ ರೈತರ ಬಗ್ಗೆ ಕಾಳಜಿ ತೆಗೆದುಕೊಂಡು ಕೆಲಸ ಮಾಡಿ. ಉದಾಹರಣೆಗಾಗಿ ಹೇಳುವುದಾದರೆ ಗದಗ್‌ನಲ್ಲಿರುವ ಕಳಸಾಪುರ ಎನ್ನುವ ಊರಿನಲ್ಲಿ ಸಾಕಷ್ಟು ನೀರು ಇತ್ತು. ಅಲ್ಲಿಯ ಬೋರ್‌ವೆಲ್‌ಗಳಲ್ಲಿ ಸಾಕಷ್ಟು ನೀರು ಬರುತ್ತಿತ್ತು. ಆದರೆ ಇವತ್ತು ಅಲ್ಲಿ ಬೋರ್‌ವೆಲ್ ತೆಗೆಸಿದರೂ ನೀರು ಸಿಗುತ್ತಿಲ್ಲ, ಕುಡಿಯುವುದಕ್ಕೆ ಅಲ್ಲಿ ನೀರು ಸಿಗುತ್ತಿಲ್ಲ. ಕೋಲಾರದ ಪರಿಸ್ಥಿತಿ ಹೇಗೆ ಇದೆಯೋ ಅದೇ ಪರಿಸ್ಥಿತಿ ನಮ್ಮ ಗದಗ್ ಜಿಲ್ಲೆಯಲ್ಲಿ ಇದೆ. ರಾಜ್ಯದ ಉತ್ತರ ಭಾಗದ ಕೆಲವು ಜಿಲ್ಲೆಗಳಲ್ಲಿ ಸಹ ಇದೇ ಪರಿಸ್ಥಿತಿ ಇದೆ. ಅದಕ್ಕಾಗಿಯೇ ಕುಡಿಯುವ ನೀರಿನ ಬಗ್ಗೆ ಪ್ರತ್ಯೇಕವಾದ ಚರ್ಚೆಯನ್ನು ಮಾಡೋಣ ಎಂದು ಕೇಳಿದಾಗ ತಾವು ಅದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಆವಾಗ ಮಾತನಾಡೋಣ. ಆದರೆ ರೈತರ ಬಗ್ಗೆ ಸರ್ಕಾರದ ಕಾಳಜಿ ಏನು? ರೈತರು ಸಾವಿರಾರು ಕೋಟಿ ರೂಪಾಯಿಗಳ ಹಾನಿಯನ್ನು ಅನುಭವಿಸುತ್ತಿದ್ದಾರೆ. ಈರುಳ್ಳಿಯನ್ನು ಬೆಳೆಸಿದ ರೈತರ ಗತಿ ಏನಾಯಿತು? ಮಾರ್ಕೆಟಿಂಗ್ ಸಚಿವರು ರೈತರಿಂದ ಬಹಳಷ್ಟು ಈರುಳ್ಳಿಯನ್ನು ಖರೀದಿ ಮಾಡಿದ್ದೇವೆಂದು ಹೇಳಿದರು. ಎಷ್ಟು ಖರೀದಿ ಮಾಡಿದಿರಿ? ಎಲ್ಲಿ ಮಾಡದಿರಿ? ಕೆಲವು ರೈತರು ಹೊಲದಿಂದ ಈರುಳ್ಳಿಯನ್ನು ತೆಗೆಯದೇ ಅಲ್ಲಿಯೇ ಬಿಟ್ಟು ಬಂದರು. ನಾನು ಪ್ರಾಮಾಣಿಕವಾಗಿ ಒಂದು ವಿಚಾರವನ್ನು ಇಲ್ಲಿ ಹೇಳುತ್ತೇನೆ. ಒಂದು ತಿಂಗಳ ಹಿಂದೆ ನಾನು ಬಸ್ಸಿನಲ್ಲಿ ಊರಿಗೆ ಹೋಗುವುದಕ್ಕೆ ಹೊರಟೆ. ನನ್ನ ಕ್ಷೇತ್ರದ ಆ ಭಾಗದ ಜನರೆಲ್ಲ ಬಂದಿದ್ದರು. ಅವರು ಈರುಳ್ಳಿ ತಂದು ಮಾರಾಟ

ಮಾಡಿದರು. ಎಷ್ಟು ಕಡಿಮೆ ಬೆಲೆಗೆ ಹೋಯಿತೆಂದರೆ ಅವರ ಗಾಡಿ ಬಾಡಿಗೆಯೂ ಸಹ ಸಿಗಲಿಲ್ಲ. ಅವರು ರೈಲುಗಾಡಿಯಲ್ಲಿ ವಾಪಸ್ಸು ಊರಿಗೆ ಹೋಗುವುದಕ್ಕೆ ಹಣ ಇಲ್ಲದೆ ಕುಳಿತಿದ್ದರು. ಕೊನೆಗೆ ನಾನು ಅವರನ್ನು ರೈಲು ಗಾಡಿಗೆ ಕರೆದುಕೊಂಡು ಹೋಗಬೇಕಾಯಿತು. ಇದು ನಡೆದಂಥ ಸತ್ಯ ಘಟನೆ. ಇಲ್ಲಿ ಗಾಂಧೀಜಿ ಫೋಟೋ ಇದೆ. ಇಲ್ಲ ಸುಮ್ಮನೆ ನಾನು ಹುಡುಗಾಟಕೆಗೆ ಹೇಳುತ್ತಿಲ್ಲ ಅಥವಾ ಸರ್ಕಾರದ ಮೇಲೆ ಟೀಕೆ ಮಾಡುವುದಕ್ಕೋಸ್ಕರ ಹೇಳುತ್ತಿಲ್ಲ. ಕೇಂಗಾ ಸೂರ್ಯಕಾಂತಿ ಈರುಳ್ಳಿ, ಜೋಳ, ಗೋಧಿ ಮುಂತಾದ ಬೆಳೆಯನ್ನು ಬೆಳೆಯತಕ್ಕಂಥ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕು. ರೈತರಿಗೆ ನೀವು ಏನೂ ಮಾಡುವುದು ಬೇಕಾಗಿಲ್ಲ. ನೀವು ಅವರಿಗೆ ಪಂಪುಸೆಟ್ಟುಗಳನ್ನು ಅಳವಡಿಸಬೇಕಾಗಿಲ್ಲ, ಕರೆಂಟ್ ಕೊಡಬೇಕಾಗಿಲ್ಲ. ನಾನು ಹಿಂದೆ ಸಚಿವನಾಗಿದ್ದಾಗ ರೈತರಿಗೆ ಕೊಡುವುದಕ್ಕೆ ಹಣ ಎಲ್ಲಿದೆ ಎಂದು ಹೇಳಿದಾಗ ನೀವು ಮತ್ತು ಶ್ರೀ ಹೆಚ್.ಕೆ.ಪಾಟೀಲರು ''ನೀವು ರೈತರ ವಿರೋಧಿ'' ಎಂದು ಮಾತನಾಡಿದಿರಿ. ಸರ್ಕಾರದಲ್ಲಿ ಹಣ ಎಲ್ಲಿದೆ, ಕೊಡುವುದಕ್ಕೆ ಯಾವ ಬಜೆಟ್‌ನಲ್ಲಿ ಇಟ್ಟಿದ್ದೀರಿ? ರೈತರ ವಿಷಯದಲ್ಲಿ ನಾನು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೆ. ನಮ್ಮ ರಾಜ್ಯದ ಎಂ.ಪಿ.ಯವರು, ಮಾನ್ಯ ಮುಖ್ಯಮಂತ್ರಿಯವರು ಸಹ ಪತ್ರ ಬರೆದಿದ್ದರು. ಎಲ್ಲರಿಗೂ ಉತ್ತರ ಬಂದಿದೆ. ಕೇಂದ್ರ ಸರ್ಕಾರದಿಂದ 10 ಸಾವಿರ ಕೋಟಿ ರೂಪಾಯಿಗಳನ್ನು ಮತ್ತು ರಾಜ್ಯಸರ್ಕಾರದಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತೆಗೆದಿಡಬೇಕು. ರೈತನಿಗೆ ತೊಂದರೆಗಳು ಬಂದಾಗ, ರೈತರ ಬೆಳೆ ಹಾಳಾದಾಗ, ರೈತರು ಬೆಳೆದಂಥ ಬೆಳೆಗೆ ಧಾರಣೆ ಬರದಿದ್ದಾಗ, ಪ್ರಾಮಾಣಿಕವಾದ ಇನ್ಸೂರೆನ್ಸ್ ಮಾಡಿಸಬೇಕು. ಇವತ್ತಿನ ಬೆಳೆ ಇನ್ಸೂರೆನ್ಸ್ ರೈತರಿಗೆ ಸಿಗುವುದೇ ಇಲ್ಲ. ಅದರಲ್ಲೂ ಬರ ಇದ್ದಂತಹ ಹಳ್ಳಿಗಳಿಗಂತೂ ಆ ಇನ್‌ಸೂರೆನ್ಸು ಹಣ ಸಿಗುವುದಿಲ್ಲ. ಆದರೆ ಈಗ ಏನೋ ಕೇಂದ್ರ ಸರ್ಕಾರ ಬದಲಾವಣೆ ಮಾಡಿದೆ. ಆ ರೀತಿಯಾಗಿ ತಾವು ಒಂದು ವ್ಯವಸ್ಥೆ ಮಾಡಿದರೆ ನೀವು ಕರೆಂಟನ್ನು ರೈತರಿಗೆ ಪುಕ್ಕಟೆ ಕೊಡುವ ಅವಶ್ಯಕತೆ ಇರುವುದಿಲ್ಲ, ಆದರೆ ಅವರಿಗೆ ಪ್ರಾಮಾಣಿಕವಾಗಿ ಬೆಳೆದಂಥ ಬೆಳೆಗೆ ಧಾರಣೆ ಕಡಿಮೆ ಆದಾಗ ಅದನ್ನು ತುಂಬಿ ಕೊಡುವಂಥ ವ್ಯವಸ್ಥೆಯನ್ನು ಮಾಡಿದರೆ ಖಂಡಿತವಾಗಿಯೂ ರೈತರು ಬೇರೆ ಏನೂ ಕೇಳುವುದಿಲ್ಲ. ಇವರ ಸಾಲ ಮನ್ನಾ ಮಾಡಬೇಕಾಗಿಲ್ಲ. ಈಗ ರೈತರ ಪಂಪುಸೆಟ್ಟುಗಳಿಗೆ ಮೋಟರ್ ಅಳವಡಿಸುವುದಕ್ಕೆ ಹೊರಟಿದ್ದಾರೆ. ಹಿಂದೆ ನಮ್ಮ ಅಧಿಕಾರಿಗಳು ಹೇಳಿದರೆಂದು ನಾವು ಮೋಟರ್ ಅಳವಡಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದೆವು. ಆಗ ಮಾನ್ಯ ಖರ್ಗೆಯವರು ಮತ್ತು ಶ್ರೀ ಹೆಚ್.ಕೆ.ಪಾಟೀಲರು ಅಯ್ಯೋ, ರೈತರನ್ನು ಹಾಳು ಮಾಡುತ್ತಿದ್ದೀರಿ, ಅವರ ಪಂಪುಸೆಟ್ಟುಗಳಿಗೆ ಮೋಟರ್ ಅಳವಡಿಸುತ್ತಿದ್ದೀರ ಎಂದು ಇಲ್ಲಿ, ಮೇಲ್ಮನೆಯಲ್ಲಿ ಕೂಗಾಡಿದರು. ಈಗ ನಿಮ್ಮ ಸರ್ಕಾರ ಏಕೆ ಮೋಟರುಗಳನ್ನು ಅಳವಡಿಸುವುದಕ್ಕೆ ಹೊರಟಿದೆ. ಇದು ಆಡಳಿತದಲ್ಲಿ ಮಾಡತಕ್ಕಂಥ ವ್ಯವಸ್ಥೆ. ನಾವು ಇಲ್ಲಿ ಸರ್ಕಾರಕ್ಕೆ ಕಪ ಹಿಂಡಬೇಕಾಗಿದೆ. ನಮ್ಮ ರಾಜ್ಯ ಆಡಳಿತ ಮಾಡುವುದಕ್ಕೆ ಕಿವುಡು

ಸರ್ಕಾರ ಬಂದಿದೆ. ಆ ದೃಷ್ಟಿಯಿಂದ ರಾಜ್ಯದಲ್ಲಿನ ಪರಿಸ್ಥಿತಿಯನ್ನು ಅವರಿಗೆ ಒತ್ತಿ ಹೇಳಬೇಕಾಗಿದೆ. ಆ ಕಾರಣದಿಂದ ರೈತರಿಗೆ ಸರಿಯಾದ ಇನ್ಸೂರೆನ್ಸ್ ಕೊಡಬೇಕು. ಯೋಗ್ಯ ಧಾರಣೆ ಕೊಡಬೇಕು, ಬೆಳೆ ಹಾನಿಯಾದಾಗ ಸಂಪೂರ್ಣವಾಗಿ ಸರ್ಕಾರ ತುಂಬಿಕೊಡುವಂಥ ವ್ಯವಸ್ಥೆ ಆಗಬೇಕು. ಅದು ಮಾಡಲಿಕ್ಕೆ ಸಾಧ್ಯ ಇದೆ. ಶ್ವೇತಪತ್ರದ ಬಗ್ಗೆ ಚರ್ಚೆ ನಡೆದಾಗ ಮುಂದೆ ಸ್ವಲ್ಪವೂ ಸಹ ಸಾಲ ತೆಗೆದುಕೊಳ್ಳದ ಹಾಗೆ ಈ ಸರ್ಕಾರವನ್ನು ನಡೆಸುವುದು ಹೇಗೆ ಎಂಬುದನ್ನು ಖಂಡಿತವಾಗಿ ಹೇಳುತ್ತೇನೆ. ನಾನು ಕೆಲವೊಂದು ಸಲಹೆಗಳನ್ನು ಕೊಡುತ್ತೇನೆ. ಅದು ಆಗುತ್ತದೋ ಇಲ್ಲವೋ ಎನ್ನುವುದನ್ನು ನೋಡೋಣ. ಆದರೆ ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ನೀವು ತಯಾರಾಗಬೇಕಾಗುತ್ತದೆ. ನಾವೆಲ್ಲರೂ ಪಕ್ಷಭೇದ ಮರೆತು ತಯಾರಾದರೆ ಈ ರಾಜ್ಯ ಉಳಿಯುತ್ತದೆ. ಈ ರಾಜ್ಯ ಮುಂದೆ ಹತ್ತಿ ಉರಿಯತಕ್ಕಂಥ ಪರಿಸ್ಥಿತಿಯನ್ನು ನಾವು ತಡೆಯಬೇಕಾಗುತ್ತದೆ. ಇನ್ನು ಆರೋಗ್ಯದ ಬಗ್ಗೆ ಹೇಳುವುದಾದರೆ, ಆರೋಗ್ಯ ಕಿಟ್ ವಗೈರೆ ಕೊಟ್ಟಿದ್ದಾರೆ. ಅದು ಯೋಗ್ಯ ಕೆಲಸವಾಗಿದೆ. ಆದರೆ ಯಾವ ಊರಿನಲ್ಲೂ ಸಹ ಡಾಕ್ಟರು ಇಲ್ಲ. ಏನು ಮಾಡುವುದು? ಇದು ನಮ್ಮ ಕಾಲದಲ್ಲೂ ಇತ್ತು ಈಗಲೂ ಇದೆ. ಅದನ್ನು ಸರಿ ಮಾಡಬೇಕಾಗುತ್ತದೆ. ಮಹಾ ಪಿಡುಗು ಅದಂಥ ಏಡ್ಸ್ ಎನ್ನುವ ಕಾಯಿಲೆ ಬಂದಿದೆ. ಯಾರಿಗೆ ಏಡ್ಸ್ ಇದೆ ಯಾರಿಗೆ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಾನು ಸ್ವಚ್ಛ ಇದ್ದೇನೆ ನನಗೆ ಏಡ್ಸ್ ಇಲ್ಲ ಎನ್ನುವ ಹಾಗಿಲ್ಲ. ಹಳ್ಳಿಗಾಡಿನಲ್ಲಿ ಡಾಕ್ಟರುಗಳು ಇರುತ್ತಾರೆ. ಅವರು ಏಡ್ಸ್ ರೋಗಿಗೆ ಚುಚ್ಚಿದ ಸೂಜಿಯನ್ನು ತೆಗೆದುಕೊಂಡು ನಮಗೂ ಅದರಲ್ಲಿಯೇ ಚುಚ್ಚುತ್ತಾರೆ. ನೋಡಿದರೆ ಗಾಬರಿಯಾಗತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇಂಥವರ ಮೇಲೆ ನಿಗಾ ಇಡದಿದ್ದರೆ ರಾಜ್ಯದಲ್ಲಿ 100ಕ್ಕೆ 80 ಜನ ಏಡ್ಸ್ ರೋಗಿಗಳಾಗುತ್ತಾರೆ. ನಾನು ಧಾರವಾಡ ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದಾಗ, ಬಹುಶಃ ಇವತ್ತಿನ ಸಚಿವರಿಗೂ ಸಹ ಗೊತ್ತಿದೆ. ಅಲ್ಲಿ ವೇಶ್ಯಾವಾಟಿಕೆ ನಡೆಸತಕ್ಕಂಥ 30 ಜನರನ್ನು ಚೆಕ್ ಮಾಡಿಸಿದಾಗ ಅವರಲ್ಲಿ 25 ಜನರಿಗೆ ಏಡ್ಸ್ ಕಾಯಿಲೆ ಇತ್ತು. ಆಮೇಲೆ ಅವರಿಗೆ ಪುನರ್‌ವಸತಿ ಕೇಂದ್ರ ಮಾಡಿಸಬೇಕೆಂದು ಹೊರಟೆ. ಅವರಿಗೆ ಏಡ್ಸ್ ಬಂದಿದೆ ಎಂದು ಹೇಳುವ ಹಾಗಿಲ್ಲವಂತೆ. ನೋಡಿ ಸ್ವಾಮಿ, ಇದು ಎಂಥ ಕಾಯಿಲೆ. ಇವರಿಗೆ ಏಡ್ಸ್ ಕಾಯಿಲೆ ಇದೆ ಎಂದು ಹೇಳಿದರೆ ಅದು ತಪ್ಪಾಗುತ್ತದಂತೆ. 'ನಾರಿಗೆ ಗುಣವೇ ಶೃಂಗಾರ' ಎಂದು ಶರಣರು ಹೇಳಿದ್ದಾರೆ. ಬಾಂಗ್ಲಾ ದೇಶದ ಹೈಕೋರ್ಟಿನಲ್ಲಿ ಒಂದು ತೀರ್ಪು ಬಂದಿದೆ. ಅದೇನಾದರೂ ನಮ್ಮ ದೇಶದಲ್ಲಿ ಬಂದುಬಿಟ್ಟರೆ ದೇವರೇ ಗತಿ. ಒಂದು ದೊಡ್ಡ ದುರಂತ ಎಂದು ಹೇಳಬೇಕಾಗುತ್ತದೆ. ಬಾಂಗ್ಲಾ ದೇಶದಲ್ಲಿ ಏನು ಹೇಳುತ್ತಾರೆಂದರೆ, ''ಕೋರ್ಟ್ ತೀರ್ಪಿಗೆ ಸ್ವಾಗತ ಬಾಂಗ್ಲಾ ಬೀದಿಗಳಲ್ಲಿ ವೇಶ್ಯೆಯರ ಮೆರವಣಿಗೆ''ನೋಡಿ ಎಂಥಾ ಸ್ಥಿತಿ ಬಂದಿದೆ ಎಂದು ''ವೇಶ್ಯಾವಾಟಿಕೆಯನ್ನು ಕಾನೂನು ಬಾಹಿರವೆಂದು ಘೋಷಿಸಲು ನಿರಾಕರಿಸಿರುವ ಬಾಂಗ್ಲಾದೇಶದ ಹೈಕೋರ್ಟಿನ ತೀರ್ಪನ್ನು ಸ್ವಾಗತಿಸಿದ ನೂರಾರು ವೇಶ್ಯೆಯರು ಗುರುವಾರ ಢಾಕಾ ಬೀದಿಯಲ್ಲಿ ವಿಜಯೋತ್ಸವ ಮೆರವಣಿಗೆ ನಡೆಸಿದರು. ಮಹಿಳೆ

ಮತ್ತು ಮಾನವ ಹಕ್ಕುಗಳ ಸಂಘಟನೆ ಏರ್ಪಡಿಸಿದ್ದ ಮೆರವಣಿಗೆಯಲ್ಲಿ ಲೈಂಗಿಕ ಕಾರ್ಯಕರ್ತೆಯವರು ಭಾಗವಹಿಸಿ ನಾಟಕ, ಹಾಡುಗಳ ಮೂಲಕ ತಮ್ಮ ಸಂತಸ ಹಂಚಿಕೊಂಡರು. ನೋಡಿ ಎಂಥ ದುರಂತ ಇದು. ಬಾಂಗ್ಲಾ ದೇಶ ನಮ್ಮ ದೇಶದ ಒಂದು ಭಾಗ. ಇವತ್ತು ಅದು ನಮ್ಮ ದೇಶದಿಂದ ಬೇರೆ ಹೋಗಿರಬಹುದು. ಅದರಲ್ಲೂ ಅದು ಮುಸ್ಲಿಂ ರಾಷ್ಟ್ರ, ಅವರು ಇಂಥ ವಿಚಾರಗಳಿಗೆ ಬಹಳ ವಿರೋಧ ಇದ್ದಂಥ ಜನ. ಈ ರೀತಿ ವೇಶ್ಯಾವಾಟಕ ಮಾಡುವವರನ್ನು ಕಲ್ಲಿನಲ್ಲಿ ಹೊಡೆದು ಕೊಲ್ಲುತ್ತಾರಂತೆ. ದುರ್ದೈವದಿಂದ ಇವತ್ತು ಆ ಘಟನೆ ಅಲ್ಲಿ ನಡೆದಿದೆ. ಇಂಥ ಪರಿಸ್ಥಿತಿಗೆ ಇದು ಬಂದಿರುವುದರಿಂದ ನನಗಂತೂ ಬಹಳ ನೋವಾಗಿದೆ. ಆದ್ದರಿಂದ, ನಾನು ಏನಂತಿ ಮಾಡಿಕೊಳ್ಳುವುದೇನೆಂದರೆ ಏಡ್ಸ್ ಕಾಯಿಲೆಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡದೇ ಇದ್ದರೆ ರಾಜ್ಯದಲ್ಲಿ ಏಡ್ಸ್ ಕಾಯಿಲೆ ಇಲ್ಲದವರನ್ನು ಹುಡುಕಿಕೊಂಡು ಬರತಕ್ಕಂಥ ಸ್ಥಿತಿ ನಿರ್ಮಾಣವಾಗುತ್ತದೆ. ಕೇಂದ್ರ ಸರ್ಕಾರ ಇದರ ಬಗ್ಗೆ ಕಾಯಿದೆಯನ್ನು ತಿದ್ದುಪಡಿ ಮಾಡಬೇಕು. ಇಲ್ಲದಿದ್ದರೆ ಒಬ್ಬ ವ್ಯಕ್ತಿಯಿಂದ ಒಬ್ಬರಿಂದ ಒಬ್ಬರಿಗೆ ಏಡ್ಸ್ ಹರಡಿ ಅದು ಎಲ್ಲರಿಗೂ ಅಂಟಿಕೊಳ್ಳುತ್ತದೆ. ಹಳ್ಳಿಯಲ್ಲಿ ಸೂಜಿ ಚುಚ್ಚುವವರಿಗೆ ಲೈಸನ್ಸ್ ಇದೆಯೋ ಇಲ್ಲವೇ ಏನ್ನುವುದನ್ನು ನೋಡಬೇಕು. ಏಕೆಂದರೆ ಅಂಥವರು ಒಬ್ಬರಿಗೆ ಚುಚ್ಚಿದ ಸೂಜಿಯನ್ನು ಮತ್ತೊಬ್ಬರಿಗೆ ಚುಚ್ಚಿ ಕಾಯಿಲೆ ಹರಡುವುದಕ್ಕೆ ಕಾರಣರಾಗುತ್ತಾರೆ. ಏಕೆಂದರೆ ಹಳ್ಳಿಗಳಲ್ಲಿ ಎಂ.ಬಿ.ಬಿ.ಎಸ್ ಓದಿದ ಡಾಕ್ಟರುಗಳು ಇಲ್ಲ, ನಮ್ಮಲ್ಲಿಯ ಆಸ್ಪತ್ರೆಗಳು ಡಾಕ್ಟರುಗಳು ಇಲ್ಲದೆ ಖಾಲಿ ಇವೆ. ಹೀಗಾಗಿ ಕಾಯಿಲೆ ಜನರು ಇನ್ನೆಲ್ಲಿಗೆ ಹೋಗುತ್ತಾರೆ. ಹಳ್ಳಿಗಳಲ್ಲಿ ಓಡಾಡತಕ್ಕಂಥ ಜನ ನಿಜವಾಗಿ ಡಾಕ್ಟರುಗಳಲ್ಲದವರ ಹತ್ತಿರ ಹೋಗಿ ಸೂಜಿ ಚುಚ್ಚಿಸಿಕೊಳ್ಳುತ್ತಾರೆ. ಇದು ಈ ರಾಜ್ಯದಲ್ಲಿ ನಡೆಯುತ್ತಿರುವಂಥ ಪರಿಸ್ಥಿತಿ. ಇನ್ನು ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಸಹಕಾರಿ ಕ್ಷೇತ್ರವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕು ಏನ್ನುವುದು ಆಡಳಿತಕ್ಕೆ ಬಂದಂಥ ಎಲ್ಲರ ಹಣೆಬರಹವೂ ಆಗಿದೆ. ಈಗ 2 ಸಾವಿರ ಕೋಟಿ ರೂಪಾಯಿಗಳನ್ನು ಸಹಕಾರಿ ಸಂಘಗಳಿಗೆ ಹಂಚುತ್ತೇವೆಂದು ಹೇಳಿದರು. ನಾನು ಏನು ಹೇಳುತ್ತೇನೆಂದರೆ ಸಹಕಾರಿ ಸಂಸ್ಥೆಗಳು ಸರಿ ಇಲ್ಲದಿದ್ದರೆ ಹೇಗಾಗುತ್ತದೆ? ಹೇಗೆ ಹಂಚುತ್ತೀರಿ? ರೈತರಿಗೆ ಟಿಕ್ಸ್‌ಟೈಲ್ಸ್ ಇಂಡಸ್ಟ್ರಿ ಮಾಡಿದೆವು, ಆಯಿಲ್ ಇಂಡಸ್ಟ್ರಿ ಮಾಡಿದೆವು, ರಾಜ್ಯದಲ್ಲಿ ರೈತರ ಸ್ಥಿತಿ ಏನಾಗಿದೆ?

10.40 ಎ.ಎಂ

ಈಗ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಉತ್ತಮ ಸ್ಥಿತಿಯಲ್ಲಿದ್ದಂಥ 12 ಡಿ.ಸಿ.ಸಿ. ಬ್ಯಾಂಕ್‌ಗಳು ಮುಚ್ಚುನಂತಹ ಹಂತದಲ್ಲಿವೆ. ಹಾಗೆಯೇ ವೆಂಕಟೇಶ್ವರ ಸಹಕಾರ ನೂಲಿನ ಗಿರಣಿ, ಅಣ್ಣಿಗೇರಿ ಇದರಲ್ಲಿ 22 ಕೋಟಿ 72 ಲಕ್ಷ 11 ಸಾವಿರ ರೂಪಾಯಿಗಳಷ್ಟು ಹಾನಿಯಾಗಿದೆ. ಹಾಗೆಯೇ ರೈತರ ಸಹಕಾರ ನೂಲಿನ ಗಿರಣಿ ಹುಲಕೋಟಿ ಇದರಲ್ಲಿ

13 ಕೋಟಿ 86 ಲಕ್ಷ 97 ಸಾವಿರ ರೂಪಾಯಿಗಳಷ್ಟು ಮತ್ತು ಸೋಮೇಶ್ವರ ನೂಲಿನ ಗಿರಣಿ ಲಕ್ಷೇಶ್ವರ ಇದರಲ್ಲಿ 14 ಕೋಟಿ 88 ಲಕ್ಷ 85 ಸಾವಿರ ರೂಪಾಯಿಗಳು ಹಾಗೂ ತುಂಗಭದ್ರ ಸಹಕಾರ ನೂಲಿನ ಗಿರಣಿ ರಾಣಿಬೆನ್ನೂರು, ಇದರಲ್ಲಿ 14 ಕೋಟಿ 19 ಲಕ್ಷ ರೂಪಾಯಿಗಳು ಮತ್ತು ರೈತರ ಸಹಕಾರ ಸಂಘ ಹನುಮನಹಟ್ಟಿ ಇದರಲ್ಲಿ 32 ಕೋಟಿ 15 ಲಕ್ಷ 72 ಸಾವಿರ ರೂಪಾಯಿಗಳಷ್ಟು ಹಾನಿಯಾಗಿದೆ. ಹಾಗೆಯೇ ರೈತರ ಸಹಕಾರ ಎಣ್ಣೆ ಗಿರಣಿ ಬಿಂಕದಕಟ್ಟಿ ಇದರಲ್ಲಿ 1 ಕೋಟಿ 34 ಲಕ್ಷ ರೂಪಾಯಿಗಳಷ್ಟು ಮತ್ತು ಮಲಪ್ರಭಾ ಸಹಕಾರ ಎಣ್ಣೆ ಗಿರಣಿ ನರಗುಂದ ಇದರಲ್ಲಿ 24 ಕೋಟಿ 23 ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆ. ಇವತ್ತಿನದಿವಸ ಈ ಎಲ್ಲಾ ಸಂಸ್ಥೆಗಳಿಂದ ಒಟ್ಟು 125 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಈ ಎಲ್ಲಾ ಸಂಸ್ಥೆಗಳ ಆಸ್ತಿಯನ್ನೆಲ್ಲಾ ಮಾರಿದರೂ ಕೂಡ 125 ಕೋಟಿ ರೂಪಾಯಿಗಳು ಬರುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಇವುಗಳಲ್ಲಿ ಒಂದೆರಡು ಬಿಟ್ಟರೆ ಉಳಿದವುಗಳನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಎಲ್ಲಾ ಸಂಸ್ಥೆಯವರು ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ಗೆ ಅಸಲು ಬಡ್ಡಿ ಸೇರಿ 48 ಕೋಟಿ ರೂಪಾಯಿಗಳಷ್ಟು ಹಣ ಕಟ್ಟಬೇಕಾಗಿತ್ತು. ಆದರೆ ಇವರು ಕಟ್ಟಿಲ್ಲ. ಇವರು ಹಣ ಕೊಡದೇ ಇರುವುದರಿಂದ ಈ ಬ್ಯಾಂಕಿನ ಸ್ಥಿತಿ ಇವತ್ತು ಏನಾಗಿದೆ ಎಂದರೆ ಸೂಪರ್ ಸೀಡ್ ಮಾಡುವಂಥ ಹಂತಕ್ಕೆ ಹೋಗಿದೆ. ಇದನ್ನು ಸರ್ಕಾರದಿಂದ ಸುಧಾರಿಸುವುದಕ್ಕಾಗುತ್ತದೆಯೇ? ಆದ್ದರಿಂದ ಈ ಹಣವನ್ನು ಸರ್ಕಾರ ಕೊಟ್ಟು ಆ ಬ್ಯಾಂಕನ್ನು ಸುಧಾರಿಸಬೇಕು. ಈ 48 ಕೋಟಿ ರೂಪಾಯಿಗಳನ್ನು ಕೊಡದೇ ಇದ್ದರೆ ಬ್ಯಾಂಕ್ ರೆಗ್ಯುಲೇಶನ್ ಆಕ್ಟ್‌ನ ಪ್ರಕಾರ ಅವರಿಗೆ ಸೆಕ್ಷನ್ 11ನ್ನು ಕಂಪ್ಲೈ ಮಾಡುವುದಕ್ಕಾಗುವುದಿಲ್ಲ. ಇದರಿಂದ ಏನಾಗುತ್ತದೆ ಎಂದರೆ, ಕೇಂದ್ರ ಸರ್ಕಾರದಿಂದ ಪರ್ಮಿಷನ್ ತೆಗೆದುಕೊಂಡು ರೈತರಿಗೆ ಸಾಲ ಕೊಡತಕ್ಕಂಥ ಸ್ಥಿತಿ ನಿರ್ಮಾಣವಾಗುತ್ತದೆ. ಆದಾಯ ಗಳಿಸದ ಆಸ್ತಿಯನ್ನು ಲೆಕ್ಕ ಇಡಬೇಕೆಂದು ಇವತ್ತು ಹೇಳಿದ್ದಾರೆ, ಇದನ್ನು ಇವತ್ತಿನದಿವಸ ತೆಗೆದು ಬಿಟ್ಟರೆ ಅವರ ಸ್ವಂತ ಬಂಡವಾಳದಲ್ಲಿಯೂ ಕೂಡ ನಷ್ಟವಾಗತಕ್ಕಂಥ ಪರಿಸ್ಥಿತಿ ಉಂಟಾಗುತ್ತದೆ. ಇವುಗಳಿಂದೆಲ್ಲಾ ಇವತ್ತಿನದಿವಸ ಡಿ.ಸಿ.ಸಿ. ಬ್ಯಾಂಕನ್ನು ಮುಚ್ಚತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತಿನ ದಿವಸ ಯಾರಾದಾರೊಬ್ಬರು ಅಧ್ಯಕ್ಷರು ಇದನ್ನು ಬಿಗಿ ಮಾಡಿದ ಕೂಡಲೇ ಇದನ್ನು ಸೂಪರ್‌ಸೀಡ್ ಮಾಡಿ ಎಂದು ಎಲ್ಲರೂ ಹೇಳುತ್ತಾರೆ. ಈಗಾಗಲೇ 140 ಕೋಟಿ ರೂಪಾಯಿಗಳಷ್ಟು ಹಾನಿಯಲ್ಲಿರುವ ಈ ಸಂಸ್ಥೆಗಳು 41 ಕೋಟಿ ರೂಪಾಯಿಗಳನ್ನು ಬ್ಯಾಂಕಿಗೆ ತುಂಬುವುದಕ್ಕೆ ಸಾಧ್ಯವಿಲ್ಲ. ಈ ಒಂದು ಕಾರಣದಿಂದಲೇ ಸರ್ಕಾರ ಇವತ್ತಿನ ದಿವಸ ಮಧ್ಯ ಪ್ರವೇಶ ಮಾಡಬೇಕು. ರೈತನಿಗೆ ಅನುಕೂಲವಾಗುವ ದೃಷ್ಟಿಯಿಂದ ಈ ಬ್ಯಾಂಕನ್ನು ಮಾಡಲಾಗಿದೆ. ಇವನ್ನು ಮುಚ್ಚುವುದಕ್ಕೂ ಆಗುವುದಿಲ್ಲ ಅಥವಾ ಉಳಿಸಿಕೊಳ್ಳುವುದಕ್ಕೂ ಆಗುವುದಿಲ್ಲ ಅಂಥ ಒಂದು ಪರಿಸ್ಥಿತಿ ಉಂಟಾಗಿದೆ. ಹಾಗೆಯೆ ಹಾನಿಯಲ್ಲಿರತಕ್ಕಂಥ ಸಂಸ್ಥೆಗಳನ್ನು ಸುಧಾರಿಸುವುವಾಕ್ಕಾಗುವುದಿಲ್ಲ. ಒಂದು ವೇಳೆ ಇದನ್ನು ಯಾರಾದರೂ ಸುಧಾರಿಸುತ್ತೇನೆ ಎಂದರೆ ಇದು ಸಾಧ್ಯವಿಲ್ಲವೆಂದು ನಾನು

ಚಾಲೆಂಜ್ ಮಾಡುತ್ತೇನೆ. ಆದ್ದರಿಂದ ಈ ಒಂದು ದೃಷ್ಟಿಯಿಂದ ಸರ್ಕಾರ ಮಧ್ಯ ಪ್ರವೇಶ ಮಾಡಲೇಬೇಕು. ಇವತ್ತಿನ ದಿವಸ ಇವೆಲ್ಲವನ್ನು ಸುಧಾರಿಸದೇ ಹೋದರೆ ಆ ಬ್ಯಾಂಕ್ ಮುಳುಗಿ ಹೋಗುತ್ತದೆ. ಹಾವೇರಿ, ಗದಗ ಮತ್ತು ಧಾರವಾಡ ಹೀಗೆ ಒಂದು ಜಿಲ್ಲೆಗೆ ಸಂಬಂಧಪಟ್ಟಂಥ ಒಂದು ಜಿಲ್ಲಾ ಮಧ್ಯವರ್ತಿ ಬ್ಯಾಂಕನ್ನು ಮುಚ್ಚುವುದರಿಂದ 20 ಕೋಟಿ ರೂಪಾಯಿಗಳಷ್ಟು ಮತ್ತೆ ಹಾನಿಯಾಗುತ್ತದೆ. ಇದರಿಂದ ಆ ಭಾಗದ ರೈತರು ವಂಚಿತರಾಗುತ್ತಾರೆ. ಆದ್ದರಿಂದ ಇವೆಲ್ಲವನ್ನು ಸರಿಪಡಿಸುವುದಕ್ಕೆ ಸರ್ಕಾರ ಮಧ್ಯೆ ಪ್ರವೇಶ ಮಾಡಲೇಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಆಡಳಿತದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಆದ್ದರಿಂದ ಕಠಿಣ ಕ್ರಮ ಯಾವ ರೀತಿ ಇರುತ್ತದೆ ಎಂಬುದನ್ನು ಸಹ ಇದರಲ್ಲಿ ಹೇಳಬೇಕಾಗಿತ್ತು. ಮೊದಲನೆಯದಾಗಿ ಕಠಿಣ ಕ್ರಮ ಎಲ್ಲಿಂದ ತೆಗೆದುಕೊಳ್ಳಬೇಕೆಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಉಳಿದವುಗಳನ್ನು ನಂತರ ಮಾತನಾಡೋಣ. ಮೊದಲನೆಯದಾಗಿ ಎಲ್ಲಾ ವಿಧಾನಸಭಾ ಸದಸ್ಯರ ಭತ್ಯೆಯಲ್ಲಿ 20 ಪರ್ಸೆಂಟ್ ನಷ್ಟವನ್ನು ಕಡಿತಮಾಡಿ. ಏಕೆಂದರೆ ಇದು ಮೊದಲು ನಮ್ಮಿಂದ ಪ್ರಾರಂಭವಾಗಬೇಕು. ಇವತ್ತಿನ ದಿವಸ ಹಾವೇರಿಗೆ ಇಷ್ಟೊಂದು ಮಂತ್ರಿಗಳು ಬೇಕಾಗಿಲ್ಲ. ಜಿಲ್ಲೆಗೆ ಒಬ್ಬ ಮಂತ್ರಿ ಸಾಕು. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿ ವ್ಯವಸ್ಥೆ ಬಂದ ಮೇಲೆ ಒಂದೊಂದು ಜಿಲ್ಲೆಗೆ ಒಬ್ಬ ಮಂತ್ರಿ ಸಾಕು. ಆದ್ದರಿಂದ ಈ ಕಠಿಣ ಕ್ರಮ ನಮ್ಮ ಶಾಸಕರಿಂದಲೇ ಪ್ರಾರಂಭವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ರೀತಿ ಮುಂದೆ ಯಾರ್ಯಾರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಅನಂತರ ಹೇಳುತ್ತೇನೆ. ಇವತ್ತಿನ ದಿವಸ ಬೆಂಗಳೂರನ್ನು ಸಿಂಗಾಪುರ ಮಾಡುವುದಕ್ಕೆ ಹೊರಟಿದ್ದೀರಿ. ಆದ್ದರಿಂದ, ಸಿಂಗಾಪುರದಲ್ಲಿ ಯಾವರೀತಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದರ ಮಾಹಿತಿಯನ್ನು ಮೊದಲು ತರಿಸಿ. ಅಲ್ಲಿ ಅನಾವಶ್ಯಕವಾದ ಸಾರಿಗೆ, ಸಂಬಳವನ್ನು ಕಡಿತ ಮಾಡಿದ್ದಾರೆ. ಆ ರೀತಿ ಇಲ್ಲಿಯೂ ಮಾಡಿದರೆ ಸುಮಾರು ಐದಾರು ಸಾವಿರ ಕೋಟಿ ರೂಪಾಯಿಗಳನ್ನು ಉಳಿಸಬಹುದು. ಇಷ್ಟೊಂದು ಹಣವನ್ನು ಉಳಿಸಿದರೆ ನಾವು ಸಾಲ ಮಾಡುವಂಥ ಅವಕಾಶ ಬರುವುದಿಲ್ಲ, ಇದರಿಂದ ಇಡೀ ರಾಜ್ಯವನ್ನೆ ಉದ್ಧಾರ ಮಾಡಬಹುದು. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ನಿಜವಾಗಿಯೂ ಕೃತಜ್ಞತೆ ಸಲ್ಲಿಸುತ್ತೇನೆ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ದಹಲಿಯಲ್ಲಿ ಸಭೆ ಕರೆದಂಥ ಸಮಯದಲ್ಲಿ ಸಭೆಗೆ ಇವರೊಬ್ಬರೇ ಹಾಜರಾಗುತ್ತಿದ್ದರು ಮತ್ತು ಇಲ್ಲಿಯೂ ಕೂಡ ಪರ್ಮನೆಂಟ್ ಆಗಿ ಇರುತ್ತಾರೆ. ಆದರೆ ಇವರ ಮಂತ್ರಿಗಳಿಗೆ ಅಧಿವೇಶನಕ್ಕೆ ಹಾಜರಾಗಲು ಏನಾಗಿದೆ? ಸಭೆಗೆ ಹಾಜರಾಗದೇ ಇರತಕ್ಕಂಥ ಮಂತ್ರಿಗಳನ್ನು ಮಂತ್ರಿ ಸ್ಥಾನದಿಂದ ತೆಗೆಯುತ್ತೇವೆಂದು ನೆನ್ನೆಯ ದಿವಸ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೀರಿ. ಇದನ್ನು ಮೊದಲು ಮಾಡಬೇಕು, ಇಲ್ಲದಿದ್ದರೆ ನಿಮ್ಮ ಹೆಸರು ಕೆಟ್ಟು ಹೋಗುತ್ತದೆ. ಕಠಿಣ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದು ಪತ್ರಿಕೆಯಲ್ಲೆಲ್ಲಾ ಬಂದಿದೆ. ತಾವು

ತೆಗೆದುಕೊಂಡಿರುವ ನಿರ್ಧಾರದಿಂದ ಇವತ್ತಿನದಿವಸ ಮೊದಲನೇ ಸಾಲಿನಲ್ಲಿ ಎಲ್ಲಾ ಮಂತ್ರಿಗಳು ಬಂದು ಕುಳಿತುಕೊಂಡಿದ್ದಾರೆ. ಕೊನೆಯದಾಗಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಏನಂತಿ ಮಾಡಿಕೊಳ್ಳುವುದೇನೆಂದರೆ, ನೀವೊಬ್ಬರು ದಕ್ಷರು, ಪ್ರಾಮಾಣಿಕರು ಇದರಲ್ಲಿ ಎರಡು ಮಾತಿಲ್ಲ. ಆದರೆ ನೀವು ಆಯೋಗವನ್ನು ಮಾಡುವುದಕ್ಕೆ ಹೊರಟಿದ್ದೀರಿ ಏಕೆ? ನಿಮ್ಮಲ್ಲಿ ಆ ದಕ್ಷತೆ ಇಲ್ಲವೆ? ಶಕ್ತಿ ಇಲ್ಲವೆ? ನೈಪುಣ್ಯತೆ ಇಲ್ಲವೆ? ಈ ರಾಜ್ಯದ ಆಡಳಿತವನ್ನು ನಡೆಸುವಂಥ ಒಂದು ನೈಪುಣ್ಯತೆ ನಿಮಗೆ ಇಲ್ಲವೆ? ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಇಲ್ಲಿ ಕುಳಿತುಕೊಂಡಿರತಕ್ಕಂಥ ಹಿರಿಯರೆಲ್ಲರಿಗೂ ನೈಪುಣ್ಯತೆ ಇದೆ. ಆದರೆ ನಾನೇನು ಹೇಳುವುದಕ್ಕೆ ಹೋಗುವುದಿಲ್ಲ. ಕೊನೆಯದಾಗಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಪುನಃ ಇವರು ಕಾಂಗ್ರೆಸ್ ನಿರಾಶ್ರಿತರಿಗೆ ಪುನರ್‌ವಸತಿ ಕೇಂದ್ರ ಮಾಡುವುದಕ್ಕೆ ಹೊರಟಿದ್ದೀರಿ. ದಯವಿಟ್ಟು ಇದನ್ನು ಮಾಡಬಾರದೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ನಾರಾಯಣಸ್ವಾಮಿ(ಆನೇಕಲ್): ಸನ್ಮಾನ್ಯ ಅಧ್ಯಕ್ಷರೆ, ಪ್ರಥಮ ಬಾರಿಗೆ ಈ ಒಂದು ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಭಾಷಣ ಮಾಡಲು ನನಗೆ ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ಇತಿಹಾಸದಲ್ಲಿ ಪ್ರಥಮ ಬಾರಿಗೆ ಹೊರ ರಾಜ್ಯದಿಂದ ಬಂದಂಥ ರಾಜ್ಯಪಾಲರು ಕನ್ನಡದಲ್ಲಿ ಭಾಷಣವನ್ನು ಬಹಳ ಹಿತವಾಗಿ ಮತ್ತು ಕನ್ನಡ ನಾಡಿನ ಜನತೆಗೆ ಅರ್ಥವಾಗುವ ರೀತಿಯಲ್ಲಿ ಭಾಷಣ ಮಾಡಿರುವುದಕ್ಕೆ ಅವರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ನಮ್ಮ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ಇದು ಹೊಸ ಸಹಸ್ರಮಾನದ ಮೊದಲನೇ ಅಧಿವೇಶನ, ಜನತೆಯ ಹೊಸ ನಿರೀಕ್ಷೆಗಳೊಂದಿಗೆ ಹೊಸ ಕನಸುಗಳನ್ನು ಕಾಣುತ್ತಿರುವ ಹೊಸ ಯುಗದ ಹೊಸ್ತಿಲಲ್ಲಿ ನಾವು ಇದ್ದೇವೆ ಎಂದು ಬಹಳ ಸ್ಪಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ಸದನದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತಿನ ರಾಜ್ಯ ಸರ್ಕಾರ ತನ್ನ ಆಡಳಿತ ವೈಖರಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಕಾರಣ ಏನೆಂದರೆ, ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರ ಗೊತ್ತುಗುರಿ ಇಲ್ಲದೇ ಹೋಗುತ್ತಿದೆ ಎಂದು ಸಮಾಜದ ಬಹುತೇಕ ಮಂದಿ ಮಾತನಾಡುತ್ತಿದ್ದಾರೆ. ಈ ಸರ್ಕಾರಕ್ಕೆ ಗೊತ್ತುಗುರಿ ಇಲ್ಲ. ಹಾಗೆಯೇ ಈ ರಾಜ್ಯದಲ್ಲಿ ಶಾಂತಿ ನೆಲೆಯನ್ನು ಸ್ಥಾಪಿಸುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಹಿಡಿತದಲ್ಲಿರತಕ್ಕಂಥ ಬಹುತೇಕ ಖಾತೆಗಳು ಈ ರಾಜ್ಯದ ಜನತೆಯ ಆತೋತ್ತರಗಳನ್ನು ಯಾವರೀತಿ ಈಡೇರಿಸಬೇಕಾಗಿದೆ ಎಂಬುದನ್ನು ಮತ್ತು ಈ ಸರ್ಕಾರದಿಂದ ಸಮಾಜ ಏನನ್ನು ನಿರೀಕ್ಷಣೆ ಮಾಡುತ್ತಿದೆ ಎಂಬುದನ್ನು ಮತ್ತು

ಸಮಾಜದ ಕಲ್ಪನೆ ಏನು ಮತ್ತು ಸಮಾಜಕ್ಕೆ ನಾವು ಏನನ್ನು ಕೊಡಬೇಕಾಗಿದೆ ಹಾಗೂ ಇವರ ಕೊಡುಗೆ ಏನು ಎಂದು ಸಮಾಜ ನಿರೀಕ್ಷೆ ಮಾಡುವಂಥ ಸಂದರ್ಭದಲ್ಲಿ ಈ ಸರ್ಕಾರ ಪೂರ್ಣವಾಗಿ ವಿಫಲವಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಉದಾಹರಣೆಯನ್ನು ಹೇಳುವುದಾದರೆ, ಇತ್ತೀಚೆಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದನಂತರ ನಮ್ಮ ರಾಜ್ಯದಲ್ಲಿ ಶಾಂತಿ ಹದಗೆಟ್ಟಿದೆ. ಶಾಂತಿ ಹದಗೆಡಲು ಮೂಲ ಕಾರಣ ಎಲ್ಲಿದೆ ಎಂದರೆ, ಇವತ್ತು ಕಂಬಾಲಪಲ್ಲಿಯಲ್ಲಿ ನಡೆದಿರತಕ್ಕಂಥ ಘಟನೆ ಇರಬಹುದು ಮತ್ತು ಮಾನ್ಯ ಮುಖ್ಯಮಂತ್ರಿ ಕ್ಷೇತ್ರದಲ್ಲಿ ಆಗಿರುವಂಥ ಯಡವನಹಳ್ಳಿ ಘಟನೆ ಇರಬಹುದು ಹಾಗೂ ದಲಿತ ನಾಗರಾಜು ಮರಣದ ಘಟನೆ ಇರಬಹುದು ಇದೇ ರೀತಿ ಬಹುತೇಕ ಘಟನೆಗಳು ನಡೆದಿವೆ. ನನ್ನ ಕ್ಷೇತ್ರದಲ್ಲಿ ಆಗಿರುವಂಥ ಒಂದು ಘಟನೆ ಬಗ್ಗೆ ಉದಾಹರಣೆ ಹೇಳುವುದಾದರೆ, 15 ದಿವಸಗಳ ಹಿಂದೆ ಇಲ್ಲಿ ಟೈಮ್ ಬಾಂಬ್ ಸಿಕ್ಕಿದೆ. ಇಜ್ಜರ ಎಂಬ ಗ್ರಾಮದಲ್ಲಿ ಟೈಂ ಬಾಂಬ್‌ಗಳು ಸಿಕ್ಕಿದಾಗ ಗುಪ್ತದಳದವರು ಬಾಂಬ್‌ಗಳನ್ನು ಹುಡುಕಿ ಅವುಗಳನ್ನು ನಿಷ್ಕ್ರಿಯೆ ಮಾಡಿದ್ದಾರೆ. ಈ ಬಾಂಬ್‌ಗಳನ್ನು ಎಲ್ಲಿಂದ ತಂದರು? ಮತ್ತು ಯಾರು ಇಲ್ಲಿಗೆ ತಂದು ಕೊಟ್ಟವರ್ಯಾರು? ಮತ್ತು ಇದನ್ನು ಯಾರ ಮೇಲೆ ಪ್ರಯೋಗ ಮಾಡುವುದಕ್ಕೆ ತಂದಿದ್ದರು ಎಂಬುದನ್ನು ಕಂಡುಹಿಡಿಯುವಲ್ಲಿ ಈ ಸರ್ಕಾರ ವಿಫಲವಾಗಿದೆ. ಇದರ ಜೊತೆಗೆ ಎಂಟೂವರೆ ತಿಂಗಳ ಹಿಂದೆ ಒಬ್ಬ ಲ್ಯಾಂಡ್ ಗ್ರಾಬರ್ ಸಾಮಾನ್ಯ ಜನತೆಯ ಮೇಲೆ ದಾಳಿ ಮಾಡಿದಾಗ ಮತ್ತು ಕೊಲೆ ಬೆದರಿಕೆ ಹಾಕಿದಾಗ ಕೂಡ ಯಾರು ಕೊಲೆ ಬೆದರಿಕೆ ಹಾಕಿದರು ಎಂಬುದನ್ನು ಈ ಸರ್ಕಾರ ಕಂಡುಹಿಡಿಯಲಿಲ್ಲ. ಇದಕ್ಕೆ ಎಫ್‌ಐಆರ್ ಹಾಕಿದರು. ಈ ಪ್ರಕರಣದಲ್ಲಿ ಒಂದು ಆಟೋರಿಕ್ಷಾ ಮತ್ತು ಒಬ್ಬ ವ್ಯಕ್ತಿ ಸಿಕ್ಕಿದರೂ ಕೂಡ ಇದುವರೆಗೂ ಮೂರು ತಿಂಗಳಾದರೂ ಈ ಕೊಲೆಗೆ ಯಾರು ಪ್ರಯತ್ನ ಮಾಡಿದರು ಎಂಬುದನ್ನು ಕಂಡು ಹಿಡಿಯುವುದಕ್ಕೆ ಆಗಿಲ್ಲ. ಈ ಎಲ್ಲಾ ಘಟನೆಗಳಿಂದ ಸರ್ಕಾರ ಎಲ್ಲಿ ವಿಫಲವಾಗಿದೆ ಎಂಬುದು ಬಹುತೇಕ ಎಲ್ಲಾ ಶಾಸಕರ ಗಮನಕ್ಕೆ ಬಂದಿದೆ. ಇವತ್ತಿನದಿವಸ 100ಕ್ಕೆ 99 ತಾಲ್ಲೂಕುಗಳಲ್ಲಿರತಕ್ಕಂಥ ಯಾವುದೇ ಪೋಲೀಸ್ ಸ್ಟೇಷನ್‌ನಲ್ಲಿ ಇವತ್ತು ಗುಪ್ತದಳದ ಪೋಲೀಸರು ಇಲ್ಲ. ಸಮಾಜಘಾತುಕ ಶಕ್ತಿಗಳು, ರಾಜಕೀಯ ಶಕ್ತಿಗಳು, ಸಂಘಟನಾತ್ಮಕ ಕಾರ್ಮಿಕ ಶಕ್ತಿಗಳು ಇವರ ಅವಶ್ಯಕತೆಗಳನ್ನು ಯಾವ ದಾರಿಯ ಮೂಲಕ ಪೂರೈಸಿಕೊಳ್ಳಬೇಕು ಎನ್ನುತಕ್ಕಂಥ ಚಿಂತನೆಯ ಕಲ್ಪನೆ ಹೊಂದಿದ್ದಾರೆ ಎಂಬ ಬಗ್ಗೆ ನಮ್ಮ ರಾಜ್ಯ ಸರ್ಕಾರದ ವತಿಯಿಂದ ಅಂದರೆ ರಾಜ್ಯ ಗುಪ್ತದಳದ ವತಿಯಿಂದ ಯಾವ ರೀತಿ ಮಾಹಿತಿ ಕಲೆಕ್ಟ್ ಮಾಡಬೇಕು ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಂತ್ರಿ ಮಂಡಲದ ಸದಸ್ಯರು ಇವತ್ತಿನದಿವಸ ಯಾವ ದಿಕ್ಕಿನಲ್ಲಿ ಸರ್ಕಾರವನ್ನು ನಡೆಸಬೇಕಾಗಿದೆ. ತನ್ಮೂಲಕ ಈ ಸಮಾಜಕ್ಕೆ ಏನನ್ನು ಕೊಡಬೇಕಾಗಿದೆ ಎಂಬುದರಲ್ಲಿ ಬಹುಶಃ ಇಡೀ ಮಂತ್ರಿ ಮಂಡಲ ವಿಫಲವಾಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಈ ಬಗ್ಗೆ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ. ಇಡೀ ರಾಜ್ಯದಲ್ಲಿ ಗುಪ್ತದಳವನ್ನು ಕಾರ್ಯೋನ್ಮುಖವಾಗಿ ಮಾಡಿ ಈ ರಾಜ್ಯದಲ್ಲಿ ಯಾವ ಯಾವ ಸಂಘಟನೆಗಳು ಯಾವ ರೀತಿಯಲ್ಲಿ ಕೆಲಸವನ್ನು ಮಾಡುತ್ತವೆ. ನಾವು ಈ ಸಮಾಜಕ್ಕೆ ಯಾವ ರೀತಿಯಾವ ಕೊಡುಗೆಯನ್ನು ಕೊಡಬೇಕೆನ್ನುವ ವಿಚಾರವನ್ನು ಚರ್ಚೆಯ ಮುಖಾಂತರ, ನಿರೀಕ್ಷೆಯ ಮುಖಾಂತರ ತೆಗೆದುಕೊಂಡರೆ ಒಳ್ಳೆಯ ಸರ್ಕಾರವನ್ನು ಈ ರಾಜ್ಯಕ್ಕೆ ಕೊಡಬಹುದು, ಆ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡಬೇಕೆಂದು ನಾನು ಈ ರಾಜ್ಯದ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದೇ ಸದನದಲ್ಲಿ ಎಸ್.ಸಿ.ಎಸ್.ಟಿ ಕಾರ್ಪೋರೇಶನ್‌ದಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಮಾನ್ಯ ಹೆ.ಜಿ.ಆರ್.ಸಿಂಧ್ಯಾರವರು ಪ್ರಸ್ತಾಪವನ್ನು ಮಾಡಿದ್ದರು. ಆ ಒಂದು ಗಂಗಾ ಕಲ್ಯಾಣ ಯೋಜನೆಯಲ್ಲಿ ನಡೆಯುತ್ತಿರುವ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದ ಬಗ್ಗೆ ಪ್ರಶ್ನೆಯನ್ನು ಎತ್ತಿದಾಗ ಅದಕ್ಕೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಾಗ ಇಡೀ ಸದನ ಹಾಗೂ ತಾವು ತೀರ್ಮಾನ ಮಾಡಿದಿರಿ, ಇದರ ಬಗ್ಗೆ ಅರ್ಧಗಂಟೆಯ ಸಮಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕಾಗಿದೆ. ಇಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ ನಾವು ಗಮನವನ್ನು ಸೆಳೆಯಬೇಕಾಗಿದೆ. ಇದರ ಬಗ್ಗೆ ತನಿಖೆಯಾಗಬೇಕು, ಅದಕ್ಕಾಗಿ ತಾವು ಅವಕಾಶವನ್ನು ಮಾಡಿಕೊಡುತ್ತೇನೆಂದು ಹೇಳಿದ್ದೀರಿ. ಬಹುತೇಕ ಎಸ್.ಸಿ/ಎಸ್.ಟಿ ಗೆ ಸೇರಿದ ಯುವಕರು ನನಗೆ ಈ ಮಂಡಲಿಯತಿಯಿಂದ ಸಹಾಯವಾಗುತ್ತದೆ, ನಾವು ಜೀವನವನ್ನು ಮಾಡಬಹುದು, ಆರ್ಥಿಕ ಸಹಾಯವನ್ನು ಪಡೆದುಕೊಳ್ಳಬಹುದು ಎಂದು ಆ ಒಂದು ಇಲಾಖೆಗೆ ಮ್ಯಾಕ್ಸಿಕ್ಯಾಬ್ ಸಲುವಾಗಿ ಅರ್ಜಿಯನ್ನು ಕೊಟ್ಟಿದ್ದರು. ಅರ್ಜಿ ಕೊಟ್ಟಾಗ ಸಾಲವನ್ನು ಮಂಜೂರು ಮಾಡಿದರು. ಸಾಲವನ್ನು ಮಂಜೂರು ಮಾಡಿದಂಥ ಸಮಯದಲ್ಲಿ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಂಥ ಸಂದರ್ಭದಲ್ಲಿ, ಟೆಂಡರ್ ಕಾಲ್ ಮಾಡಿದಂಥ ಸಂದರ್ಭದಲ್ಲಿ ಅವರು ತೋರಿಸಿದ ವಾಹನಕ್ಕೂ ಇವರು ಬಿಡುಗಡೆ ಮಾಡಿದಂಥ ವಾಹನಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಸಾಲವನ್ನು ಕೊಟ್ಟು, ಆ ಸಾಲಕ್ಕೆ ಗ್ಯಾರಂಟಿಯನ್ನು ಕೊಟ್ಟು, ಸಾಲವನ್ನು ಪಡೆದು ಜೀವನ ಮಾಡಿ ಈ ಸಾಲವನ್ನು ನಾವು ತೀರಿಸುತ್ತೇವೆ. ನಾವು ವಿದ್ಯಾವಂತ ಯುವಕರಾಗಿದ್ದೇವೆ, ಪದವೀಧರರಾಗಿದ್ದೇವೆ, ಆ ಪದವಿ ಪ್ರಮಾಣ ಪತ್ರಗಳನ್ನು ನಿಮಗೆ ಒತ್ತೆ ಇಡುತ್ತೇವೆ, ಎಂದು ಹೇಳಿ ಎಲ್ಲವನ್ನು ಕೊಟ್ಟಾದ ಮೇಲೆ ಆರ್.ಟಿ.ಓ.ಗೆ ಹೋದರು, ಆರ್.ಟಿ.ಓ. ಕಛೇರಿಯಲ್ಲಿ ರಿಜಿಸ್ಟರ್ ಮಾಡಿಸಿ ಎಂದು ಹೇಳಿದರೆ ಅಲ್ಲಿ ರಿಜಿಕ್ಟ್ ಮಾಡಿದರು ಇದರ ಬಗ್ಗೆ ಪೂರ್ಣವಾದ ತನಿಖಾ ಮಾಹಿತಿ ಸರ್ಕಾರಕ್ಕೆ ಬಂದಿದ್ದರೂ ಸಹ ಇದುವರೆಗೆ ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇದು ಯಾವುದೇ ಉಳ್ಳಂತ ಜನರಿಗೆ ಕೊಟ್ಟಂಥ ಸಾಲವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಇದಕ್ಕೆ

ಸಂಬಂಧಪಟ್ಟ ಕಡತವನ್ನು ನಾನು ಕೂಡ ನೋಡಿದ್ದೇನೆ. ಅರ್ಜಿಗಳನ್ನು ಆಹ್ವಾನಿಸಿ ಆಯ್ಕೆಯನ್ನು ಕೂಡ ಮಾಡಿದ್ದಾರೆ, ಆಯ್ಕೆ ಪ್ರಕಾರ ಅವರಿಗೆ ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರವಾಗಿ ವಾಹನಗಳನ್ನು ಪಡೆದು ಅಗ್ರಿಮೆಂಟ್‌ನ್ನು ಬರೆದು ಕೊಟ್ಟಿದ್ದಾರೆ. ಅಗ್ರಿಮೆಂಟ್ ಬರೆದ ನಂತರ ರಿಜಿಸ್ಟರ್ ಕೂಡ ಆಗಿರುತ್ತದೆ. ಅವರು ಆ ವಾಹನವನ್ನು ಇವತ್ತು ಉಪಯೋಗ ಕೂಡ ಮಾಡುತ್ತಿದ್ದಾರೆ. ಅಗ್ರಿಮೆಂಟ್ ಪಡೆದುಕೊಂಡು ಆ ವಾಹನವನ್ನು ಕೂಡ ಪಡೆದುಕೊಂಡು ಉಪಯೋಗ ಮಾಡಿ ನಾಲ್ಕೈದು ತಿಂಗಳು ಆದ ಮೇಲೆ ತಕರಾರು ಎತ್ತಿದರೆ ಈಗ ಅದನ್ನು ಸರಿಪಡಿಸುವುದು ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಆ ವಾಹನವನ್ನು ಪಡೆದವನು ಬಹಳ ಸಫರ್ ಆಗಿರುತ್ತಾನೆ. ಅವರು ಹೇಳಿದ್ದೊಂದು ವಾಹನ ಆದರೆ ಮಂಜೂರು ಮಾಡಿದ ವಾಹನ ಬೇರೆಯಾಗಿದೆ. ಇದು ಬಹಳ ಸೀರಿಯಸ್ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ: ನೀವು ವಕೀಲರಾಗಿದ್ದವರು, ನಾನು ಏನಾದರೂ ಒಂದು ಒತ್ತಡವನ್ನು ಮಾಡಬೇಕಾದರೆ ಬಲವಾದ ಸಾಕ್ಷಿ ಬೇಕಲ್ಲ. ಮ್ಯಾಕ್ಸಿಕ್ಯಾಬ್ ಸಲುವಾಗಿ ಅರ್ಜಿಯನ್ನು ಕರೆದದ್ದು ನಿಜ, ಅದರ ಪ್ರಕಾರ ರಾಷ್ಟ್ರೀಯ ಅಭಿವೃದ್ಧಿ ನಿಗಮದಿಂದ ಸಾಲವನ್ನು ಕೊಟ್ಟಿದ್ದು, ಅದರಿಂದ ವಾಹನವನ್ನು ಪಡೆದದ್ದು ನಿಜ. ವಾಹನ ತೆಗದುಕೊಳ್ಳುವಾಗ ತಿರಸ್ಕಾರ ಮಾಡುವುದಕ್ಕೆ ಅವಕಾಶ ಇತ್ತು. ಈಗ ಅಗ್ರಿಮೆಂಟ್ ಬರೆದು ಕೊಟ್ಟಿದ್ದಾರೆ ರಿಜಿಸ್ಟ್ರೇಶನ್ ಆಗಿದೆ, ಅದನ್ನು ಉಪಯೋಗ ಕೂಡ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮ್ಯಾಕ್ಸಿಕ್ಯಾಬ್ ಬದಲಾಗಿ ಬೇರೆ ವಾಹನವನ್ನು ಕೊಡಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಅದಕ್ಕೆ ಟೆಂಡರನ್ನು ಕರೆದಿದ್ದಾರೆ. ಟೆಂಡರ್‌ನಲ್ಲಿ ಐಸರ್ ಹಾಗೂ ಟಾಟಾ ಕಂಪನಿಯವರು ಮಾತ್ರ ಭಾಗವಹಿಸಿದ್ದಾರೆ. ಪರಿಶೀಲನೆ ಮಾಡಿದಾಗ ಐಸರ್ ಕಂಪನಿಯ ವಾಹನದ ಬಗ್ಗೆ ಲಾಭದಾಯಕವಾಗಿ ಕಂಡುಬಂದಿದೆ, ಅದು ಯೋಗ್ಯವಾಗಿ ಕಂಡು ಬಂದಿರುವುದರಿಂದ ಅದನ್ನು ಒಪ್ಪಿಕೊಂಡಿದ್ದಾರೆ. ಅದರಲ್ಲಿ ಏನು ಮುಚ್ಚುಮರೆ ಇರುವುದಿಲ್ಲ. ಅರ್ಜಿಯನ್ನು ಕರೆದಿದ್ದಾರೆ, ಸಂದರ್ಶನ ಮಾಡಿದ್ದಾರೆ. ಅದರಲ್ಲಿ ಅರ್ಜಿದಾರರು ಐಸರ್ ಕಂಪನಿ ವಾಹನ ಬೇಕೆಂದು ಆಯ್ಕೆ ಮಾಡಿಕೊಂಡಿದ್ದಾರೆ. ಅದರ ಮೇಲೆ ಇಲಾಖೆ ಪರ್ಚೇಸ್ ಮಾಡಿಕೊಂಡಿದೆ. ಆಮೇಲೆ ಅವರಿಗೆ ಕೂಡುವಾಗ ರಿಜಿಸ್ಟ್ರೇಶನ್ ಎಲ್ಲಾ ಆಗಿದೆ. ಎಲ್ಲಾ ಹಂತಗಳಲ್ಲಿ ಅವರು ಏನು ಹೇಳಲಿಲ್ಲ. ಅದನ್ನು ತೆಗದುಕೊಂಡು ನಾಲ್ಕೈದು ತಿಂಗಳುಗಳ ನಂತರದಲ್ಲಿ ಕೆಲವರು ಈ ತಕರಾರನ್ನು ಎತ್ತಿದ್ದಾರೆ. ಅದು ಸರಿಯಾಗಿ

ನಡೆಯುವುದಿಲ್ಲ ಅನ್ನುತ್ತಿದ್ದಾರೆ. ಅದನ್ನು ಸರ್ಟಿಫಿಕೇಟ್ ಮಾಡಿದ್ದಾರೆ, ಟೆಸ್ಟ್ ಕೂಡ ಮಾಡಿರುತ್ತಾರೆ. ನಿಮಗೆ ಎಲ್ಲವನ್ನು ತೋರಿಸಿ ಎಂದರೆ ತೋರಿಸುತ್ತೇನೆ. ನನಗೆ ಅದನ್ನು ಹೈಡ್ ಮಾಡಬೇಕೆಂದು ಏನಿಲ್ಲ. ಹಿಂದೆ ಇದೇ ಸದನದಲ್ಲಿ ಮಾನ್ಯ ಸುಳ್ಯದ ಸದಸ್ಯರು ಇದೇ ಪ್ರಸ್ತಾಪವನ್ನು ಮಾಡಿದ್ದರು. ತಾವು ಕೂಡ ಅದರ ಬಗ್ಗೆಯೇ ಪ್ರಸ್ತಾಪವನ್ನು ಮಾಡುತ್ತಿದ್ದೀರಿ. ಅದಕ್ಕೋಸ್ಕರವಾಗಿ ನಾನು ಇದನ್ನು ವಿವರಿಸಿ ಹೇಳಬೇಕಾಯಿತು.

ಶ್ರೀ ಎ.ನಾರಾಯಣಸ್ವಾಮಿ: ಆರ್.ಟಿ.ಓ. ಇಲಾಖೆಯಿಂದ ಇದನ್ನು ರಿಜೆಕ್ಟ್ ಮಾಡಿರುವುದಕ್ಕೆ ದಾಖಲೆ ಇದೆ.

ಶ್ರೀ ಎಸ್.ಅಂಗಾರ(ಸುಳ್ಯ): ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವ ಸಮಯದಲ್ಲಿ ಉಲ್ಲೇಖ ಮಾಡಿದ್ದೇನೆ. ಎಂ.ಡಿ.ಯವರು ಯಾರಿಗೆ ಯಾವ ವಾಹನ ಬೇಕು ಅದರ ಪ್ರಕಾರ ಕೊಟ್ಟಿರುತ್ತಾರೆ. ಕೊಟೇಶನ್ ಪ್ರಕಾರ ವಾಹನವನ್ನು ಕೊಟ್ಟಿಲ್ಲ. ಎಂ.ಡಿಯವರು ಮ್ಯಾಕ್ಸಿಕ್ಯಾಬ್ 1060ರ ಮಾದರಿಯ 22 ಪೀಲ್ಸ್ ಉಳ್ಳಂತ ವಾಹನಗಳನ್ನು ತೋರಿಸಿ 1050ರ ಮಾದರಿಯ ವಾಹನಗಳನ್ನು ಕೊಟ್ಟಿದ್ದಾರೆ. ನಾನು ಅದನ್ನು ಸ್ಪಷ್ಟವಾಗಿ ಹೇಳಿದೆ. ಸೇಲ್ಸ್ ಸರ್ಟಿಫಿಕೇಟ್‌ನಲ್ಲಿ 1060 ಪೀಲ್ಸ್ ವಾಹನಗಳು ಎಂದು ತೋರಿಸಿದ್ದಾರೆ.

ಅಧ್ಯಕ್ಷರು: ರಾಜ್ಯಪಾಲರ ಭಾಷಣಕ್ಕೆ ತಾವು ಸಲಹೆಯನ್ನು ಕೊಡಬೇಕು. ಕೋರ್ಟಿನಲ್ಲಿ ಡಿಸ್‌ಕಸ್ ನಡೆದಂತೆ ಇಲ್ಲಿ ಮಾತನಾಡಿದರೆ ಹೇಗೆ? ತಾವು 5 ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು. ಡೀಟೈಲ್ಸ್ ಬೇಕಾಗಿರುವುದಿಲ್ಲ. ಆರ್ಗ್ಯುಮೆಂಟ್ಸ್ ಕೂಡ ಬೇಕಾಗಿರುವುದಿಲ್ಲ.

ಶ್ರೀ ಎ.ನಾರಾಯಣಸ್ವಾಮಿ: ಸರ್ಕಾರಿ ಅಧಿಕಾರಿಗಳ ನಡತೆ ಏನು? 18 ಪರ್ಸೆಂಟ್ ಏನು ಹಣವನ್ನು ಕೊಟ್ಟು ವೆಚ್ಚ ಮಾಡಬೇಕಾಗಿದೆ, ಅದರ ಬಗ್ಗೆ ನಾವು ಗಮನವನ್ನು ಕೊಡದಿದ್ದರೆ ಆ ಬಗ್ಗೆ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ, ನಾವು ಜನರ ಬಗ್ಗೆ ಎಚ್ಚೆತ್ತುಕೊಳ್ಳುತ್ತೇವೆ. ಈ ಬಗ್ಗೆ ನಾವು ಪ್ರಶ್ನೆಯನ್ನು ಏಕೆ ಮಾಡುತ್ತೇವೆಂದರೆ, ಮ್ಯಾಕ್ಸಿಕ್ಯಾಬ್ ಪಡೆದಂಥ ಆ ಯುವಕರಿಗೆ ಇವತ್ತು ಪಡೆದುಕೊಂಡಂಥ ಸಾಲವನ್ನು ಕಟ್ಟವುದಕ್ಕಾಗುತ್ತಿಲ್ಲ. ಆ ವಾಹನವನ್ನು ಮಾರಿದರೆ ಅರ್ಧ ಬೆಲೆಗೆ ಮಾರಾಟವಾಗುತ್ತದೆ, ಸಾಲವನ್ನು ಹೇಗೆ ಅವರು ತೀರಿಸಬೇಕು? ಯಾವುದೇ ಬ್ಯಾಂಕಿನಲ್ಲಿ ಇವತ್ತು ಖಾತೆಯನ್ನು ಮಾಡಿಸಬೇಕಾದರೆ 500 ರೂಪಾಯಿಗಳಿಲ್ಲದೆ ಖಾತೆಯನ್ನು ಮಾಡುವುದಿಲ್ಲ. ಎಸ್ಸಿ:ಎಸ್ಟಿಯವರಿಗೆ 500 ರೂಪಾಯಿಗಳನ್ನು ಹೊಂದಿಸುವುದೇ ಕಷ್ಟವಾಗಿದೆ. ಸಾವಿರ ರೂಪಾಯಿಗಳ ಸಾಲವನ್ನು ಪಡೆದುಕೊಂಡು ಅದನ್ನು ತುಂಬಬೇಕಾದರೆ 10 ಸಲವಾದರೂ ತಿರುಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮಂಥವರು ಸರ್ಕಾರಕ್ಕೆ ಸಲಹೆಯನ್ನು ಕೊಡಬೇಕು, ಇಂತಹ ಸ್ಕೀಂನಿಂದ ನೀವು ಕೊಡತಕ್ಕಂಥ ಸೌಲಭ್ಯದಿಂದ ಅವರಿಗೆ ಲಾಭವನ್ನು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ತೊಂದರೆ ಬರುತ್ತದೆ, ತಾವು ಇದನ್ನು ಪರಿವರ್ತನೆಯನ್ನು ಮಾಡಿ, ತಾವು ಏನಾದರೂ ಬದಲಾವಣೆಯನ್ನು ಮಾಡುವುದಕ್ಕೆ ಸಲಹೆಯನ್ನು ಕೊಟ್ಟರೆ, ಅದನ್ನು ನಾವು ಗಂಭೀರವಾಗಿ ಪರಿಗಣನೆ ಮಾಡುತ್ತೇವೆ.

ಅಧ್ಯಕ್ಷರು: ಡಿಮ್ಯಾಂಡ್ಸ್ ಮೇಲೆ ಬಂದಾಗ ಪೂರ್ಣವಾಗಿ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಎ.ನಾರಾಯಣಸ್ವಾಮಿ: ಅಧ್ಯಕ್ಷರೆ, ನಾನು ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆಯುತ್ತಿದೆ. ಎಸ್ಸಿ:ಎಸ್ಟಿಗೆ ಸೇರಿದಂಥ ಬಿ.ಎ.ಎಸ್ ಅಧಿಕಾರಿಗಳು ಎಸ್ಸಿ:ಎಸ್ಟಿ ಜನರಿಗೆ ವಂಚನೆಯನ್ನು ಮಾಡುತ್ತಿದ್ದರೆ ಯಾರು ಇದನ್ನು ಸರಿಪಡಿಸಬೇಕು. ಅವರನ್ನು ಯಾರು ರಕ್ಷಣೆ ಮಾಡುವುದು? ಅವರು 10 ಸಾವಿರ ರೂಪಾಯಿಗಳ ಸಾಲವನ್ನು ಪಡೆಯಬೇಕಾದರೆ 20 ಸಲವಾದರೂ ಹೋಗಬೇಕು, ಗ್ಯಾರಂಟಿ ಕೊಡಬೇಕು ಮನೆ ಅಥವಾ ಜಮೀನು ಇರಬೇಕು 5 ಲಕ್ಷ ರೂಪಾಯಿಗಳನ್ನು ಕೊಡುವಾಗ ದಾಖಲೆಗಳು ಸರಿಯಿಲ್ಲವೆಂದು ರಿಜೆಕ್ಟ್ ಮಾಡುವುದಕ್ಕಾಗುತ್ತದೆಯೇ? ಆ ಯುವಕನಿಗೆ ವಾಹನ ಬಂದರೆ ಸಾಕಾಗಿರುತ್ತದೆ. ಅಂತಹ ಒಬ್ಬ ಪದವೀಧರ ಯುವಕನ ಅರ್ಜಿ ರಿಜೆಕ್ಟ್ ಮಾಡುವುದಕ್ಕಾಗುತ್ತದೆಯೇ? ಜಾಹಿರಾತಿನಲ್ಲಿ ಅಧಿಕಾರಿಗಳು ಏನು ಕೊಟ್ಟಿದ್ದರು? ಆ ಜಾಹಿರಾತಿನಲ್ಲಿ ಕೊಟ್ಟರುವಂಥ ವಾಹನವನ್ನು ಕೊಡದೆ ಬೇರೆ ವಾಹನಗಳನ್ನು ಕೊಟ್ಟಂಥ ಈ ಅಧಿಕಾರಿಗಳ ಮೇಲೆ ತನಿಖೆಯನ್ನು ಮಾಡಿ, ಅವರು ಯಾವುದೇ ಅಧಿಕಾರಿಗಳಾಗಿರಬಹುದು. ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಹಿರಿಯರಾಗಿದ್ದಾರೆ. ತಮಗೆ ಈ ಸಮಾಜದ ಬಗ್ಗೆ ಕಳಕಳಿ ಇದೆ ಎಂದು ನನಗೆ ವಿಶ್ವಾಸ ಇದೆ. ತಮಗೆ ಒಂದು ವಿಚಾರ ಗೊತ್ತಿರಬಹುದು. ಆಟೋಗಳನ್ನು ಸಪ್ಲೈ ಮಾಡುವುದಕ್ಕೆ ಕೊಟ್ಟು ಮೂರು ವರ್ಷಗಳಾಗಿವೆ. ಇಲ್ಲಿಯವರೆಗೆ ಕೇವಲ 4-5 ಆಟೋಗಳನ್ನು ಸಪ್ಲೈ ಮಾಡಿದ್ದಾರೆ. ಒಂದು ಆಟೋಗೆ ನಂಬರ್ ಇಲ್ಲವೆಂದು ರಿಜೆಕ್ಟ್ ಮಾಡಿದ್ದಾರೆ. ಅಂತಹ ಸಂಸ್ಥೆಯ ಮೇಲೆ ಸರ್ಕಾರ ಇದುವರೆಗೆ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನಾನು 18 ಪರ್ಸೆಂಟ್ ಶಾಸಕನಾಗಿ 18 ಪರ್ಸೆಂಟ್ ಆದರೂ ಮಾತನಾಡಲು ಅವಕಾಶ ಮಾಡಿ ಕೊಡಿ ಎಂದು ಕೇಳಬೇಕಾಗುತ್ತದೆಯೋ ಏನೋ? ಮತ್ತೆ ನನಗೆ ಯಾವಾಗ ಅವಕಾಶವನ್ನು ಮಾಡಿಕೊಡುತ್ತೀರಿ, ಅವಕಾಶವನ್ನು ಮಾಡಿಕೊಡದೆ ಹೋದರೆ ನಾವು ಹೆಚ್ಚಿಗೆ ಮಾತನಾಡುವುದಕ್ಕಾಗುವುದಿಲ್ಲ. ಬಹಳ ಕಡುಬಡವರಿಗೆ ಮತ್ತು ನಿರ್ಲಕ್ಷಕ್ಕೆ ಒಳಗಾದಂಥ ಜನಾಂಗದ ಅಭಿವೃದ್ಧಿಗೋಸ್ಕರ ಸ್ಥಾಪನೆಯಾಗಿರುವ ಎಸ್ಸಿ:ಎಸ್ಟಿ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಈ ಸಮಾಜಕ್ಕೆ ಮತ್ತು ಈ

ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ತಮ್ಮ ದೃಷ್ಟಿಕೋನದಲ್ಲಿ ಇಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ತನಿಖೆಗೆ ಒಳಪಡಿಸಬೇಕೆಂದು ಮಾನ್ಯ ಸಭಾನಾಯಕರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಯಾವುದೇ ಅಧಿಕಾರಿ ತಪ್ಪನ್ನು ಮಾಡಿದಾಗ ಅತನಮೇಲೆ ಉಗ್ರ ಕ್ರಮ ತೆಗೆದುಕೊಂಡಾಗ ಮಾತ್ರ ಜನತೆ ನಿಮ್ಮ ಮೇಲೆ ಇಟ್ಟುಕೊಂಡಿರತಕ್ಕಂಥ ಆಕೋತ್ತರಗಳ ಜೊತೆಗೆ ತಾವು ಸಾಮಾಜಿಕ ನ್ಯಾಯವನ್ನು ಕೊಡುತ್ತಾರೆಂದು ಜನತೆ ಏನು ಭಾವನೆಯನ್ನು ಇಟ್ಟುಕೊಂಡಿದ್ದಾರೆ ಅದಕ್ಕೆ ಸ್ಪಂದನೆ ಮಾಡಿದಂತೆ ಆಗುತ್ತದೆ ಎಂದು ಈ ಒಂದು ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ನಾನೊಂದು ಪ್ರಸ್ತಾವನೆಯನ್ನು ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಏನೆಂದರೆ ಬಹುತೇಕ ವರ್ಷಗಳಿಂದ ಪ್ರತಿ ವರ್ಷ ಮಂಡಿಸತಕ್ಕಂಥ ಬಜೆಟ್‌ನಲ್ಲಿ ವಿಶೇಷ ಘಟಕ ಯೋಜನೆಗೆಂದು ಹಣವನ್ನು ನಿಗದಿ ಮಾಡಲಾಗಿರುತ್ತದೆ. 1995-96ನೇ ಇಸವಿಯಲ್ಲಿ ವಿಶೇಷ ಘಟಕ ಯೋಜನೆಯಲ್ಲಿದ್ದಂಥ ಹಣದಲ್ಲಿ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಲ್ಲ ಹಾಗೆಯೇ 96-97ರಲ್ಲಿ 70 ಕೋಟಿ ರೂಪಾಯಿ ಮತ್ತು 97-98ರಲ್ಲಿ 60 ಕೋಟಿ ರೂಪಾಯಿ ಹಾಗೂ 98-99ರಲ್ಲಿ 40 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿಲ್ಲ. ಇವತ್ತಿನದಿವಸ ಮೀಸಲಾತಿಯನ್ನು ತಂದಿರತಕ್ಕಂಥ ದೃಷ್ಟಿಕೋನ ಏನೆಂದರೆ, ಈ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ಮತ್ತು ಸಾಮಾಜಿಕ ಸಮಾನತೆಯನ್ನು ತರಬೇಕೆಂದು ಮತ್ತು ಸಮಾಜದ ತುಳಿತಕ್ಕೆ ಒಳಪಟ್ಟ ಜನಾಂಗವನ್ನು ಮೇಲಕ್ಕೆ ಎತ್ತಬೇಕೆಂಬ ದೃಷ್ಟಿಯಿಂದ ಮೀಸಲಾತಿ ಪದ್ಧತಿಯನ್ನು ತಂದಿದ್ದೇವೆ. ಇದಕ್ಕೋಸ್ಕರವೇ ಪ್ರತಿ ವರ್ಷ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣವನ್ನು ನಿಗದಿ ಮಾಡಿರುತ್ತೇವೆ. ಆದರೆ ಪ್ರತಿ ವರ್ಷ ಸುಮಾರು 70 ಕೋಟಿ ರೂಪಾಯಿಗಳನ್ನು ಈ ವರ್ಗದ ಜನರಿಗೋಸ್ಕರ ವೆಚ್ಚ ಮಾಡದೇ ಹಾಗೆಯೇ ಉಳಿಸಿ ಈ ಸಮಾಜಕ್ಕೆ ಮೋಸಮಾಡುತ್ತಿದ್ದೀರಿ ಈ ಸಮಾಜ ನಿಮ್ಮಿಂದ ಏನನ್ನು ಅಪೇಕ್ಷೆ ಪಡಬೇಕಾಗಿದೆ? ಇವತ್ತಿನ ದಿವಸ ಮಾನ್ಯ ಸಭಾನಾಯಕರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವು ಈ ರಾಜ್ಯದ ಆರ್ಥಿಕ ವಿಷಯಕ್ಕೆ ಸಂಬಂಧಪಟ್ಟಂತೆ ಶ್ವೇತಪತ್ರವನ್ನು ಹೊರಡಿಸಿದ್ದೀರಿ. ಎಸ್‌ಸಿ:ಎಸ್‌ಟಿ ಕಮಿಟಿಯಲ್ಲಿ ನಾನು ಬಹುತೇಕ ವಿಷಯಗಳ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ನನ್ನ ಗಮನಕ್ಕೆ ತಿಳಿದು ಬಂದಿದ್ದು ಏನೆಂದರೆ, ವಿಶೇಷ ಘಟಕ ಯೋಜನೆಯಲ್ಲಿರತಕ್ಕಂತ ಹಣವನ್ನು ಬೇರೆ ಜನಾಂಗದ ಅಭಿವೃದ್ಧಿಗೋಸ್ಕರ ವೆಚ್ಚವನ್ನು ಮಾಡಿದ್ದಾರೆ. ಇದೇ ರೀತಿ ತುಂಬಾ ಕೆಲಸಗಳು ಆಗಿವೆ. ಆದ್ದರಿಂದ ಮಾನ್ಯ ಸಭಾನಾಯಕರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಇವತ್ತು ರಾಜ್ಯದಲ್ಲಿ ಕೆಲವು ವರ್ಷಗಳ ಕಾಲ ಬೇರೆ ಪಕ್ಷಗಳು ಆಡಳಿತ ನಡೆಸಿದ್ದನ್ನು ಬಿಟ್ಟರೆ ಹೆಚ್ಚು ವರ್ಷ ಕಾಂಗ್ರೆಸ್ ಸರ್ಕಾರ ಆಡಳಿತವನ್ನು ನಡೆಸಿದೆ. ತಾವು ಇಷ್ಟು ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗಕ್ಕೆ ವೆಚ್ಚ ಮಾಡಿದಂಥ 18 ಪರ್ಸೆಂಟ್ ಬಗ್ಗೆ ಶ್ವೇತಪತ್ರವನ್ನು ಹೊರಡಿಸಿ. ಏಕೆಂದರೆ, ಇಷ್ಟು ದಿವಸ ನಾವೇನು ಈ ಜನಾಂಗಕ್ಕೆ ನ್ಯಾಯವನ್ನು ಒದಗಿಸಿಕೊಟ್ಟಿದ್ದೇವೆ ಎನ್ನತಕ್ಕಂಥದ್ದು

ತಿಳಿಯುತ್ತದೆ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರು ಕಾಂಗ್ರೆಸ್ ಮೇಲೆ ಇಟ್ಟಿರತಕ್ಕಂಥ ಅಭಿಮಾನ ಮತ್ತು ನಿಮ್ಮೆಲ್ಲರ ಅಪೇಕ್ಷೆ ಹಾಗೂ ನಿಮ್ಮ ಅಭಿಮಾನ ಇಡೀ ರಾಜ್ಯಕ್ಕೆ ಗೊತ್ತಾಗುತ್ತದೆ. ಆದ್ದರಿಂದ ಈ ಒಂದು ವೃಥಾ ಸಂಕಲ್ಪವನ್ನು ನಮ್ಮ ಸಭಾನಾಯಕರು ಮಾಡಿ ತೋರಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ಈ ಸರ್ಕಾರದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದೇ ರೀತಿ ದಿನನಿತ್ಯ ಅನೇಕ ಪ್ರಕರಣಗಳು ನಡೆಯುತ್ತಿವೆ. ಇವತ್ತಿನ ದಿವಸ ನನ್ನ ಕ್ಷೇತ್ರದಲ್ಲಿ ಗಣಕಾರಿಕೆಯಿಂದ ಸಾರ್ವಜನಿಕರ ಆಸ್ತಿ ಮತ್ತು ಪ್ರಾಣ ಹಾನಿಯಾಗುತ್ತಿದೆ. ಹಾಗೆಯೇ ರಾಷ್ಟ್ರೀಯ ಉದ್ಯಾನವನದ ಸುತ್ತಮುತ್ತಲೂ ಗಣಿಗಾರಿಕೆ ಮಾಡುತ್ತಿದ್ದಾರೆ ಮತ್ತು ಇಲ್ಲಿ ಅನೆಗಳ ಹತ್ಯೆ ನಡೆಯುತ್ತಿದೆ ಎಂಬುದನ್ನು ನಾವು ದಿನ ನಿತ್ಯ ಪತ್ರಿಕೆಯಲ್ಲಿ ನೋಡುತ್ತಿದ್ದೇವೆ.

ಅಧ್ಯಕ್ಷರು: ಎಸ್.ಸಿ.ಎಸ್.ಟಿ ಜನಾಂಗದವರಿಗೆ ಎಲ್ಲಿ ಅನ್ಯಾಯವಾಗಿದೆ ಇದನ್ನು ಯಾವ ರೀತಿ ಸುಧಾರಣೆ ಮಾಡಬೇಕು ಎಂಬುದರ ಬಗ್ಗೆ ಮಾತ್ರ ಸಲಹೆಯನ್ನು ಕೊಡಿ. ಉಳಿದ ವಿಷಯಗಳ ಬೇಡಿಕೆ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಹುದು.

ಶ್ರೀ ಎ.ನಾರಾಯಣಸ್ವಾಮಿ: ರಾಷ್ಟ್ರೀಯ ಉದ್ಯಾನವನ ಬೆಂಗಳೂರಿಗೆ ಬಹಳ ಹತ್ತಿರದಲ್ಲಿದೆ. ಈ ರಾಜ್ಯದ ಬಹುತೇಕ ಅಧಿಕಾರಿಗಳು ಜಿಟಿಎಂ ಲೇಔಟ್ ಮತ್ತು ಜೆಪಿ ನಗರದಲ್ಲಿ ವಾಸ ಮಾಡುತ್ತಿದ್ದಾರೆ. ಯಾವತ್ತು ನಮ್ಮ ಮನೆಗೆ ಆನೆ ಬರುತ್ತದೆಯೋ ಇದರಿಂದ ಏನು ಅನಾಹುತವಾಗುತ್ತದೆಯೋ ಎಂದು ಇವರೆಲ್ಲರೂ ಭಯಭೀತರಾಗಿದ್ದಾರೆ. ಆದ್ದರಿಂದ, ಈ ಒಂದು ವಿಚಾರವನ್ನು ಸರ್ಕಾರವು ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 25 ಸಾವಿರ ಎಕರೆ ಪ್ರದೇಶದಲ್ಲಿ ಇವತ್ತು ರಾಷ್ಟ್ರೀಯ ಉದ್ಯಾನವನ್ನು ಸ್ಥಾಪನೆ ಮಾಡಲಾಗಿದೆ. ಇಲ್ಲಿರತಕ್ಕಂಥ ಪ್ರಾಣಿಗಳಿಗೆ ಮತ್ತು ಇಲ್ಲಿಗೆ ಬರತಕ್ಕಂಥ ಪ್ರವಾಸಿಗೋಸ್ಕರ ಇವತ್ತಿನದಿವಸ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಬಡ ಕುಟುಂಬದ ರೈತರು ಹೊಲದಲ್ಲಿ ಬೆಳೆದಂಥ ಬೆಳೆಯನ್ನು ಆನೆಗಳು ಬಂದು ನಾಶ ಮಾಡಿದಂಥದ್ದಕ್ಕೆ ಸರ್ಕಾರ ಯಾವರೀತಿ ಪರಿಹಾರ ಕೊಡುತ್ತಿದ್ದಾರೆಂದರೆ, ಇವತ್ತಿನ ದಿವಸ ಒಂದು ಮೂಟೆ ರಾಗಿಯನ್ನು ಕೊಂಡು ಕೊಳ್ಳಬೇಕಾದರೆ 600 ರೂಪಾಯಿ ಬೇಕಾಗುತ್ತದೆ. ಆದರೆ ಸರ್ಕಾರ ಇಲ್ಲಿ ಕೊಡತಕ್ಕಂಥ ಪರಿಹಾರ ಕೇವಲ 150 ರೂಪಾಯಿಗಳು ಮಾತ್ರ. ಈ ಆನೆಗಳು ಬರುವುದನ್ನು ತಡೆಯುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ದೊಡ್ಡ ದೊಡ್ಡ ಹೊಂಡಗಳನ್ನು ತೆಗೆದಿದ್ದಾರೆ. ಇದಕ್ಕೋಸ್ಕರ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ನಾನು ಈಗಾಗಲೇ ಒಂದು ಪ್ರಶ್ನೆಯನ್ನು ಕೇಳಿದ್ದೆ.

ಅಧ್ಯಕ್ಷರು: ನೀವು ತುಂಬಾ ಡೀಟೈಲ್ ಆಗಿ ಮಾತನಾಡುತ್ತಿದ್ದೀರಿ. ಈ

ವಿಷಯಗಳೆಲ್ಲವನ್ನು ಬೇಡಿಕೆ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಹುದು. ಈಗ ಜನರಲ್ ಆಗಿ ಸಲಹೆ ಕೊಟ್ಟರೆ ಸಾಕು. ಒಬ್ಬೊಬ್ಬರು ಸುಮಾರು ಮುಕ್ಕಾಲು ಗಂಟೆ ಮಾತನಾಡಿದರೆ ಸಮಯವನ್ನು ಯಾವರೀತಿ ಹೊಂದಾಣಿಕೆ ಮಾಡಬಹುದೆಂದು ನೀವೇ ಹೇಳಿ.

ಶ್ರೀ ಎ.ನಾರಾಯಣಸ್ವಾಮಿ: ಆನೆಗಳನ್ನು ತಡೆಯುವುದಕ್ಕೋಸ್ಕರ ದೊಡ್ಡ ದೊಡ್ಡ ಹೊಂಡಗಳನ್ನು ತೆಗೆಯಲು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಆನೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಈ ಹೊಂಡಗಳನ್ನು ಸರಿಯಾಗಿ ಮಾಡಿಲ್ಲ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಅವ್ಯವಹಾರವಾಗಿದೆ. ಇವತ್ತಿನ ದಿವಸ ಇಲ್ಲಿ ರಬ್ಬರ್ ವಾಲ್ಟನ್ನು ಕಟ್ಟಿಲ್ಲ ಮತ್ತು ಹೊಂಡವನ್ನು ಸರಿಯಾಗಿ ತೆಗೆಯದೇ ಇರುವುದರಿಂದ ಆನೆಗಳು ಬೆಂಗಳೂರು ನಗರಕ್ಕೆ ಬರದೆ ಮತ್ತೆಲ್ಲಿಗೆ ಹೋಗುತ್ತವೆ? ಇದಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಪೆಚ್ಚು ಮಾಡಿ ಅಲ್ಲಿನ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡಿಸದೇ ಇರುವುದರಿಂದ ಆನೆಯ ದಾಳಿಯಿಂದ ಈ ವರ್ಷದಲ್ಲಿ 8 ಜನರು ಸತ್ತಿದ್ದಾರೆ. ಮಾನ್ಯ ಗಣಿಗಾರಿಕೆ ಮಂತ್ರಿಗಳು ಗಣಿಗಾರಿಕೆ ವಿಷಯದ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದಿದ್ದರು. ಇತ್ತೀಚಿನ ಕಾಂಗ್ರೆಸ್ ಸರ್ಕಾರದ ಬಹುತೇಕ ಮಂತ್ರಿಗಳು ಯಾವ ಕ್ಷೇತ್ರಕ್ಕೆ ಯಾವಾಗ ಹೋಗುತ್ತೇವೆ ಎಂಬುದನ್ನು ಮತ್ತು ಕೊನೆಪಕ್ಷ ಆ ಕ್ಷೇತ್ರಕ್ಕೆ ಹೋದಾಗ ಆ ಕ್ಷೇತ್ರದ ಪ್ರತಿನಿಧಿಯನ್ನು ಮಾತನಾಡಿಸಬೇಕು ಮತ್ತು ಸ್ಥಳಕ್ಕೆ ಭೇಟಿ ನೀಡುವಾಗ ಅವರನ್ನು ಕರೆದುಕೊಂಡು ಹೋಗಬೇಕು ಮತ್ತು ಕೆಲವು ವಿಚಾರಗಳನ್ನು ಕ್ಷೇತ್ರದ ಶಾಸಕರ ಮುಖಾಂತರ ಮತ್ತು ಜನತೆಯ ಮುಖಾಂತರ ಪಡೆಯಬೇಕೆಂಬ ನಿರ್ಧಾರ ಇವತ್ತಿನ ದಿವಸ ಯಾರೊಬ್ಬ ಮಂತ್ರಿಗಳಲ್ಲಿಯೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು: ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಕೆಲವು ಸಲಹೆಗಳನ್ನು ಕೊಡಿ ಎಂದರೆ ನೀವು ಮಿನಿಸ್ಟರ್‌ರವರು ನಮ್ಮ ಕ್ಷೇತ್ರಕ್ಕೆ ಬಂದಾಗ ಮಾತನಾಡಿಸಲಿಲ್ಲ ಅಂದರೆ ಏನರ್ಥ ನೀವೇ ಹೇಳಿ.

ಶ್ರೀ ಎ.ನಾರಾಯಣಸ್ವಾಮಿ: ಕ್ಷೇತ್ರದ ಸಮಸ್ಯೆಗಳು ಆಯಾಯ ಕ್ಷೇತ್ರದ ಶಾಸಕರಿಗೆ ಮಾತ್ರ ಗೊತ್ತಿರುತ್ತದೆ. ಆದ್ದರಿಂದ ಮಂತ್ರಿಗಳು ಬಂದಾಗ ಶಾಸಕರನ್ನು ಮಾತನಾಡಿಸಬೇಕೆಂದು ಹೇಳಿದೆನಷ್ಟೆ. ಆನೆಗಳನ್ನು ತಡೆಯುವುದಕ್ಕೋಸ್ಕರ ನಿರ್ಮಿಸಿರುವ ಹೊಂಡಗಳನ್ನು ಮಾಡುವುದರಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಅವ್ಯವಹಾರವಾಗಿದೆ. ಇದರ ಬಗ್ಗೆ ಬಹುತೇಕ ರೈತರು ಹೋರಾಟ ಮಾಡುವುದಾಕ್ಕಾಗುತ್ತಿಲ್ಲ. ರಾತ್ರಿ ಸುಮಾರು 8 ರಿಂದ 11 ಗಂಟೆ ಸಮಯದಲ್ಲಿ ಬೆಂಗಳೂರಿನಿಂದ ಬನ್ನೇರುಘಟ್ಟ ರಸ್ತೆಯ ಮೂಲಕ ಆನೇಕಲ್‌ಗೆ ಹೋಗಬೇಕಾದರೆ

ಆನೆಗಳು ಯಾವ ಸಂದರ್ಭದಲ್ಲಿ ಬಂದು ಏನು ಮಾಡುತ್ತದೆ ಎಂದು ಜನರು ಭಯಭೀತರಾಗಿದ್ದಾರೆ. ಹಾಗೆಯೇ ಗಣಿಗಾರಿಕೆಯನ್ನು ಯಾವ ಸ್ಥಳದಲ್ಲಿ ಮಾಡಬೇಕಾಗಿದೆ ಎಂದು ಮತ್ತು ಸರ್ಕಾರದ ವತಿಯಿಂದ ಯಾರು ಪರ್ಮಿಷನ್ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಸರ್ಕಾರಕ್ಕೆ ಚಿಂತನೆಯೇ ಇಲ್ಲವೆಂದು ಕಾಣುತ್ತದೆ. ಇದರ ಬಗ್ಗೆ ಅಧಿಕಾರಿಗಳು ಪ್ರಾಮಾಣಿಕವಾಗಿ ತನಿಖೆ ಮಾಡಿ ವರದಿ ಮಾಡಿದರೆ ಸರ್ಕಾರಕ್ಕೆ ಉಪಯೋಗವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸಭಾನಾಯಕರು ಸಾಮಾಜಿಕ ನ್ಯಾಯದ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಇನ್ನು ಪೀಸಲಾತಿ ಬಗ್ಗೆ ತಿದ್ದುಪಡಿ ತರಬೇಕು. ಹಾಗೆಯೇ ಈ ಸಮಾಜದಲ್ಲಿ ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಹೇಳಿದ್ದಾರೆ. 40 ವರ್ಷಗಳ ಇತಿಹಾಸದಲ್ಲಿ ಒಂದು ವರ್ಗದ ಜನಾಂಗಕ್ಕೆ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದಕ್ಕೆ ಹಕ್ಕಿಲ್ಲವೆಂದು ನಾನು ಹೇಳುತ್ತಿದ್ದೇನೆ. ಮಂತ್ರಿಮಂಡಲದಲ್ಲಿ ರಾಜ್ಯದ ಬಹುತೇಕ ವಿಚಾರಗಳನ್ನು ಚರ್ಚೆ ಮಾಡುತ್ತಾರೆ ಎಂಬುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಈ ರಾಜ್ಯದಲ್ಲಿ ಪರಿಶಿಷ್ಟ ವರ್ಗದಲ್ಲಿ ಸುಮಾರು 60 ಲಕ್ಷ ಜನರು ಎಡಗೈ ಜನಾಂಗಕ್ಕೆ ಸೇರಿದವರು ಇದ್ದಾರೆ. ಇವತ್ತಿನ ದಿವಸ ಈ ಜನಾಂಗದ ಜನಪ್ರತಿನಿಧಿಗಳಿಗೆ ಕ್ಯಾಬಿನೆಟ್‌ನಲ್ಲಿ ಪ್ರಾತಿನಿಧ್ಯವನ್ನೇ ಕೊಟ್ಟಿಲ್ಲ. ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಲ್ಲ, ಅದನ್ನು ಎಲ್ಲಿ ಕೊಟ್ಟಿದ್ದಾರೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು. ಪಂಚಾಯತಿಯಲ್ಲಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಸಾಮಾಜಿಕ ನ್ಯಾಯ ಕೊಡಬೇಕು ಅದರೆ ಈಗ ನಮ್ಮ ಮಂತ್ರಿಮಂಡಲದಲ್ಲಿ ಸಾಮಾಜಿಕ ನ್ಯಾಯ ಇಲ್ಲದೇ ಇರುವುದರಿಂದ ಈ ಒಂದು ಜನಾಂಗಕ್ಕೆ ಪ್ರಥಮ ಬಾರಿಗೆ ಕಪಾಳಮೋಕ್ಷವಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿ ಮಾಡುವುದೇನೆಂದರೆ, ತಮಗೆ ಸಾಮಾಜಿಕ ನ್ಯಾಯದ ಬಗ್ಗೆ ಕಲ್ಪನೆ ಇದೆ ಮತ್ತು ತಾವು ಪ್ರಜ್ಞಾವಂತರಿದ್ದೀರಿ ಹಾಗೂ ಈ ರಾಜ್ಯದಲ್ಲಿರತಕ್ಕಂಥ ಸಮಾಜದ ಬಗ್ಗೆ ತಮಗೆ ಅರಿವು ಇದೆ. ಆದ್ದರಿಂದ ತಾವು ಸಾಮಾಜಿಕ ನ್ಯಾಯವನ್ನು ಕೊಡುವುದರಲ್ಲಿ ಒಂದು ದೃಢವಾದ ಸಂಕಲ್ಪವನ್ನು ಮಾಡಿದರೆ ಈ ಒಂದು ವರ್ಗದ ಜನರಿಗೆ ಆಗಿರತಕ್ಕಂಥ ಅನ್ಯಾಯಕ್ಕೆ ನ್ಯಾ ದೊರಕಿಸಿಕೊಡಬಹುದೆಂದು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿದ್ದಾರೆ. ಆದರೆ ಶ್ವೇತಪತ್ರವನ್ನು ಏತಕ್ಕೆ ಹೊರಡಿಸುತ್ತಾರೆ? ಇದರಿಂದ ಆರ್ಥಿಕವಾಗಿ ಯಾವರೀತಿ ದುರ್ಬಳಕೆಯಾಗುತ್ತಿದೆ ಎಂಬುದು ತಿಳಿಯುತ್ತದೆ. ಇದು ಏಕೆ ಆಗುತ್ತಿದೆ ಎನ್ನತಕ್ಕಂಥದ್ದು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆಯಾಗಿದೆ. ಬಹುಶಃ 8- 10 ವರ್ಷಗಳ ಹಿಂದೆ ಐಎಸ್ ಮತ್ತು ಐಪಿಎಸ್ ಅಧಿಕಾರಿಗಳು ಸರ್ಕಾರಿ ವಾಹನಗಳನ್ನು ಕಛೇರಿಯ ಸಮಯದಲ್ಲಿ ಮಾತ್ರ ಉಪಯೋಗ ಮಾಡುತ್ತಿದ್ದರು. ಬೇರೆ ಸಮಯದಲ್ಲಿ ಉಪಯೋಗ ಮಾಡುವುದಕ್ಕೆ ಭಯಪಡುತ್ತಿದ್ದರು. ತಾಲ್ಲೂಕಿನ ಜವಾಬ್ದಾರಿ ಮತ್ತು

ಯಾವುದೇ ಸಮಸ್ಯೆ ಬಂದಾಗ ಅದಕ್ಕೆ ನಾನು ಸ್ಪಂದನೆ ಮಾಡಬೇಕಾಗಿದೆ ಎನ್ನತಕ್ಕಂಥ ಜವಾಬ್ದಾರಿ ಇವತ್ತಿನ ದಿವಸ ಅಲ್ಲಿನ ಉನ್ನತ ಅಧಿಕಾರಿಗಳಿಗೆ ಇರಬೇಕು. ಆದರೆ ಬೆಂಗಳೂರಿನ ಸುತ್ತಮುತ್ತಲೂ ಇರತಕ್ಕಂಥ ಯಾವುದೇ ಅಧಿಕಾರಿಗಳು ತಾಲ್ಲೂಕು ಕೇಂದ್ರಗಳಲ್ಲಿ ಇರುವುದಿಲ್ಲ. ಹಾಗೆಯೇ ಕಾರಿನ ಚಾಲಕರು ಕಛೇರಿ ವೇಳೆ ಮುಗಿದ ನಂತರ ಬಸ್‌ನಲ್ಲಿ ಮನೆಗೆ ಹೋಗದೆ ಅಧಿಕಾರಿಗಳ ಕಾರನ್ನೇ ಮನೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ.

12- 10 ಪಿ. ಎಂ

ರಜಾ ದಿನಗಳಲ್ಲಿ, ಹಬ್ಬದ ದಿನಗಳಲ್ಲಿ ವಾಹನಗಳನ್ನು ಉಪಯೋಗಿಸುತ್ತಾರೆ. ಬಹುಶಃ ಅಧಿಕಾರಿ ಇದ್ದಾಗ ಮಾತ್ರ ಆ ವಾಹನಗಳು ಕಛೇರಿಯಿಂದ ಹೊರಗಡೆ ಹೋಗಬೇಕು. ಅಧಿಕಾರಿಗಳು ಇಲ್ಲದೆ ಈ ವಾಹನವನ್ನು ಉಪಯೋಗಿಸುವುದರಿಂದ ಲಕ್ಷಾಂತರ ರೂಪಾಯಿಗಳು ಇದರಿಂದಾಗಿ ವೆಚ್ಚವಾಗುತ್ತದೆ. ಬಹುಶಃ ಅದನ್ನು ಯಾರೋ ಉಪಯೋಗಿಸುತ್ತಿದ್ದಾರೆಂದು ಹೇಳಬಹುದು, ಹಾಗೆಯೇ ಮಂತ್ರಿಗಳದು ಅಷ್ಟೆ, ಶಾಸಕರು ಇಲ್ಲದೆ ಹೋದರೆ ವಿಧಾನ ಸಭೆಗೆ ಸಂಬಂಧಪಟ್ಟ ಕಾರುಗಳು ತೆಗೆದುಕೊಂಡು ಹೋಗುವ ಹಾಗಿಲ್ಲ. ಹಾಗಾದರೆ ಮಂತ್ರಿಗಳು ಎಲ್ಲಿ ಬೇಕಾದರೂ ಒಡಾಡಬಹುದಾ? ಇದರಿಂದಾಗಿ ಎಷ್ಟು ಕೋಟ್ಯಾಂತರ ರೂಪಾಯಿಗಳು ವೆಚ್ಚವಾಗುತ್ತದೆ. ಇದಕ್ಕೆ ನಿರ್ಬಂಧವನ್ನು ಹಾಕಲೇಬೇಕಾಗಿದೆ. ಈ ಸಮಯದಲ್ಲಿ ನಮ್ಮ ಸಭಾನಾಯಕರು ಇದರ ಬಗ್ಗೆ ದೃಢಸಂಕಲ್ಪವನ್ನು ಮಾಡಬೇಕಾಗಿದೆ. ಯಾವುದೋ ಒಬ್ಬ ಅಧಿಕಾರಿ ಯಾವುದೇ ತಾಲ್ಲೂಕಿನ ಕೇಂದ್ರಸ್ಥಾನದಲ್ಲಿ ಕಂಪಲ್‌ಸರಿ ಇರಲೇಬೇಕಾಗಿದೆ, ಎಂಬ ಬಗ್ಗೆ ಕಡ್ಡಾಯವಾಗಿ ಆದೇಶ ಹೋಗಬೇಕಾಗಿದೆ. ಯಾವ ಅಧಿಕಾರಿಯು ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಇರುವುದಿಲ್ಲ, ಅಂತಹ ಅಧಿಕಾರಿಯು ತಾಲ್ಲೂಕಿನಲ್ಲಿ ಮುಂದುವರಿಯುವುದಕ್ಕೆ ಅವಕಾಶವೇ ಇರುವುದಿಲ್ಲ. ಇದರ ಜೊತೆಗೆ ಎಲ್ಲಾ ಸರ್ಕಾರಿ ವಾಹನಗಳು ರಜಾ ಸಮಯದಲ್ಲಿ ಈ ರಾಜ್ಯದ ಯಾವುದೇ ಅಧಿಕಾರಿಯ ಮನೆಯಲ್ಲಿ ಇರಬಾರದು. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ನಮ್ಮ ಮುಖ್ಯಮಂತ್ರಿಗಳು ತೆಗೆದುಕೊಂಡರೆ ಈ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಕೋಟ್ಯಾಂತರ ರೂಪಾಯಿಗಳು ಉಳಿತಾಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೆಪಿಟಿಸಿಎಲ್ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಮಾನ್ಯ ನಾರಾಯಣಸ್ವಾಮಿಯವರೆ, ತಮ್ಮ ಭಾಷಣವನ್ನು ಬೇಗನೆ ಮುಗಿಸಿ ಎಂದು ಎಷ್ಟು ಸಲ ನಿಮಗೆ ಹೇಳಬೇಕು. ನೋ ಐ ಕ್ಯಾಮ್ ವೆರಿ ಸಾರಿ.

ಶ್ರೀ ಡಿ.ಪಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವವರ ಲಿಸ್ಟ್‌ನ್ನು ತಮಗೆ ಕೊಟ್ಟಿದ್ದೇನೆ.

ಅಧ್ಯಕ್ಷರು: ಯಾರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಡಿಮ್ಯಾಂಡ್ಸ್ ಬಂದಾಗ ತಾವೆಲ್ಲರೂ ಮಾತನಾಡಬಹುದು. I cannot allow.

ಈಗ ಯಾರು ಮಾತನಾಡದೆ ಇದ್ದಾರೋ ಅವರಿಗೆಲ್ಲಾ ಡಿಮ್ಯಾಂಡ್ಸ್ ಬಂದಾಗ ಮಾತನಾಡುವುದಕ್ಕೆ ಅರ್ಧಗಂಟೆಗಳ ಕಾಲಾವಕಾಶವನ್ನು ಕೊಡುತ್ತೇನೆ. You must cooperate with the Chair. No, you please co-operate.

ಶ್ರೀ ಜಗದೀಶ್ ಶೆಟ್ಟರ್: ಪಾರ್ಟಿವೈಸ್ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಪಾರ್ಟಿವೈಸ್ ಲೆಕ್ಕ ಹಾಕುವುದಾದರೆ ಈಗಾಗಲೇ ಬಿಜೆಪಿಯವರು ಇದರ ಬಗ್ಗೆ 4 ಗಂಟೆಗಳ ಕಾಲ ಮಾತನಾಡಿದ್ದಾರೆ. ಜನತಾದಳದವರು 6 ಗಂಟೆ 20 ನಿಮಿಷಗಳ ಕಾಲ ಮಾತನಾಡಿದ್ದಾರೆ. You must cooperate with the chair. ಡಿಮ್ಯಾಂಡ್ಸ್ ಬಂದಾಗ ಎಲ್ಲರೂ ಮಾತನಾಡಬಹುದು. ಇದರಲ್ಲಿ ನನ್ನದೇನು ಅಭ್ಯಂತರವಿಲ್ಲ. ಮಾನ್ಯ ನಾರಾಯಣಸ್ವಾಮಿಯವರೆ ತಾವು ಆದಷ್ಟು ಬೇಗನೆ ಮುಗಿಸಬೇಕು. ತಾವುಗಳೆಲ್ಲರೂ ಅಧ್ಯಕ್ಷರ ಜೊತೆಯಲ್ಲಿ ಸಹಕರಿಸಬೇಕು, ಇವತ್ತು ಮಾತನಾಡುವುದಕ್ಕೆ ಯಾರ್ಯಾರು ಮಿಸ್ ಆಗಿದ್ದಾರೋ ಅವರಿಗೆಲ್ಲಾ ಡಿಮ್ಯಾಂಡ್ಸ್ ಬಂದಾಗ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎ.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ ತಾವು ಈ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಮುಂದಿನ ದಿನಗಳಲ್ಲಿ ನಮ್ಮ ಸಭಾನಾಯಕರು ಈ ಸಭೆಯಲ್ಲಿ ಆಡಳಿತದ ಬಗ್ಗೆ ಮಾನ್ಯ ಸದಸ್ಯರುಗಳು ನೀಡಿರುವ ಮಾರ್ಗದರ್ಶನವನ್ನು ಮತ್ತು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕರ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯ ದೃಢಸಂಕಲ್ಪಗಳನ್ನು ಮಾಡುತ್ತಾರೆ ಎಂದು ಆಶಿಸಿ ನನಗೆ ಮಾಡನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ಸನ್ಮಾನ್ಯ ಅಧ್ಯಕ್ಷರಿಗೆ ಹಾಗೂ ಸಭೆಗೆ ಮತ್ತೊಮ್ಮೆ ವಂದನೆಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರಪ್ಪನವರು ಎರಡು ಮಾತುಗಳನ್ನಾಡಲು ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಿಂಧ್ಯರವರೆ, ದಯವಿಟ್ಟು ಅವರು ಈಗ ಮಾತನಾಡುವುದು ಬೇಡ. ಈಗ ಸಭಾನಾಯಕರು ಮಾತನಾಡುತ್ತಾರೆ.

ಶ್ರೀ ಎಸ್.ಎಂ.ಕೃಷ್ಣ(ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ಸಭೆಯು ಒಂದು ನಿಗದಿತವಾದಂತಹ ಟೈಮ್ ಫ್ರೇಮ್‌ನಲ್ಲಿ ಕಲಸ ಮಾಡಬೇಕಾಗಿರುವಂತದ್ದು

ಬಹಳ ಅವಶ್ಯಕವಾಗಿದೆ. ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇತರ ರಾಜಕೀಯ ಪಕ್ಷ ಮುಖಂಡರುಗಳ ಜೊತೆಯಲ್ಲಿ ಮಾತನಾಡಿ ಒಂದು ಟೈಮ್‌ಟೇಬಲ್‌ನ್ನು ಫಿಕ್ಸ್ ಮಾಡಿರುತ್ತೇವೆ. ರಾಜ್ಯಪಾಲರ ಭಾಷಣದ ಮೇಲೆ ಇಷ್ಟು ದಿವಸಗಳಲ್ಲಿ ಚರ್ಚೆ ನಡೆದಿದೆ. ಆದರೆ ಇನ್ನೂ ನಾವು ಮಾತನಾಡುವುದಕ್ಕೆ ಅವಕಾಶ ಬೇಕು ಎಂದು ಕೇಳತಕ್ಕಂಥದ್ದು ಇದೇನು ಹೊಸದೇನು ಅಲ್ಲ. ಇದು ಪ್ರತಿಯೊಂದು ವಿಧಾನಸಭೆಯಲ್ಲಿ ಕೇಳಿ ಬರುವಂತಹ ಮಾತಾಗಿದೆ. ನಾನು ವಿರೋಧಪಕ್ಷದಲ್ಲಿ ಕುಳಿತಿದ್ದಾಗಲೂ ಕೂಡ ಇಂತಹ ಒತ್ತಾಯಗಳು ನಮ್ಮ ಮೇಲೆ ಬರುತ್ತಿತ್ತು. ಈಗಲೂ ಬರುತ್ತಿದೆ, ನಾಳೆಯೂ ಬರುತ್ತದೆ. ಅದಕ್ಕೆ ನಾನು ಎಕ್ಸ್‌ಪ್ಲನ್ ತೆಗೆದುಕೊಳ್ಳುವ ದೃಷ್ಟಿಯಿಂದ ಎದ್ದು ನಿಂತಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರುಗಳು ವಿಧಾನಸಭೆಯಲ್ಲಿ ಮಂತ್ರಿಗಳು ಇರಬೇಕೆಂದು ಹೇಗೆ ಅಪೇಕ್ಷೆ ಪಡುತ್ತಾರೋ, ಹಾಗೆಯೇ ಈ ಸಭೆಯ ಕಾರ್ಯಕಲಾಪಗಳು ಕೂಡ ಒಂದು ನಿಯಮಗಳ ಆಧಾರದ ಮೇಲೆ ನಡೆಯಬೇಕಾಗಿರುತ್ತದೆ. ತಾವು ಏನು ಕಾಲಪರಿಮಿತಿಯನ್ನು ಹಾಕುತ್ತೀರಿ, ಆ ಕಾಲಪರಿಮಿತಿಯ ಚೌಕಟ್ಟಿನೊಳಗಡೆ ನಾವು ಈ ನಿರ್ಣಯದ ಮೇಲೆ ಉತ್ತರ ನೀಡಿ ನಿರ್ಣಯದ ಬಗ್ಗೆ ತೀರ್ಮಾನ ಮಾಡಬೇಕಾಗಿದೆ. ಆದ್ದರಿಂದ ನಾನು ವಿಶೇಷವಾಗಿ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಮಾನ್ಯ ಸಭಾಧ್ಯಕ್ಷರ ನಿರ್ದೇಶನಕ್ಕೆ ತಾವೆಲ್ಲರೂ ಬದ್ಧರಾಗಬೇಕೆಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ತಾವು ಉತ್ತರವನ್ನು ಕೊಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ತಾವು ನನಗೆ ಮಾತನಾಡಿ ಎಂದು ಹೇಳಿದ್ದೀರಿ.

ಅಧ್ಯಕ್ಷರು: ನಾನು ನಿಮಗೆ ಮಾತನಾಡಿ ಎಂದು ಹೇಳಲಿಲ್ಲ. ಡಿಮ್ಯಾಂಡ್ಸ್ ಬಂದಾಗ ತಾವು ಮಾತನಾಡಬಹುದು ಎಂದು ಹೇಳಿರುವುದು ನಿಜ. ಈಗ ತಾವು ಕುಳಿತುಕೊಳ್ಳಿ. You please cooperate with the Chair.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರಣ್ಣನವರು ಒಂದೆರಡು ನಿಮಿಷ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿ ಹಾಗೂ ಮಾನ್ಯ ಚಂದ್ರಣ್ಣನವರು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೂಡಬೇಕು.

ಅಧ್ಯಕ್ಷರು: ಈಗಾಗಲೇ ಒಬ್ಬೊಬ್ಬರು ಅರ್ಧಗಂಟೆ, ಮುಕ್ಕಾಲು ಗಂಟೆ ಮಾತನಾಡಿದ್ದಾರೆ. ಈಗಲೂ ಸಮಯ ಬೇಕೆಂದು ಕೇಳುತ್ತೀರಿ, ಇದು ಹೇಗೆ ಆಗುತ್ತದೆ. How can I manage. ಡಿಮ್ಯಾಂಡ್ಸ್ ಬಂದಾಗ ಎಲ್ಲರೂ ಮಾತನಾಡಬಹುದು.